**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಚಿಂಚೋಳಿ**

**ಉಪಸ್ಥಿತರು:-ಶ್ರೀ ಪ್ರೇಮ್‌ಕುಮಾರ್.**

ಎಂ.ಎ. ಎಲ್.ಎಲ್.ಬಿ.
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಚಿಂಚೋಳಿ.

ಅಸಲು ದಾವೆ ನಂ::೭೭:೨೦೧೩

ತೀರ್ಪಿನ ದಿನಾಂಕಃ ೧೧ನೇ ಸೆಪ್ಟೆಂಬರ್–೨೦೧೮

ವಾದಿಯರು.....

೧. ಶಾನುಬೀ ಗಂಡ ಲೇಟ್ ಸೈಯದ್ ಪಟೇಲ್, ೩೫ ವರ್ಷ, ಉಃ ಮನೆಕೆಲಸ.
೨. ನಜೀಯಾ ಬೇಗಂ ತಂದೆ ಲೇಟ್ ಸೈಯದ್ ಪಟೇಲ್, ೧೨ ವರ್ಷ.

೨ನೇ ವಾದಿ ಅಪ್ರಾಪ್ತ ವಯಸ್ಕರಾಗಿದ್ದು, ಅವರ ಪರವಾಗಿ ಅವರ ತಾಯಿಯಾದ ೧ನೇ ವಾದಿ ಪ್ರತಿನಿಧಿಸಿರುತ್ತಾರೆ. ಇಬ್ಬರ ವಾಸಃ ಹುಲಸಗೂಡ ಗ್ರಾಮ, ಚಿಂಚೋಳಿ ತಾಲ್ಲೂಕ್, ಕಲಬುರಗಿ ಜಿಲ್ಲೆ. ಸದ್ಯ ವಾಸಃ ಹರಕಂಚಿ ಗ್ರಾಮ, ಚಿಂಚೋಳಿ ತಾಲ್ಲೂಕ್, ಕಲಬುರಗಿ ಜಿಲ್ಲೆ.

(ಶ್ರೀ ಎಸ್.ಪಿ.ಆರ್./ಸಿ.ಬಿ.ಎಸ್ ವಾದಿಯರ ಪರ ವಕೀಲರು)

-ವಿರುದ್ಧ-

ಪ್ರತಿವಾದಿಯರು....

೧. ಜುಲೇಖಾಬೀ ಗಂಡ ಲೇಟ್ ಹುಸೇನ್ ಪಟೇಲ್, ೩೫ ವರ್ಷ, ಉಃ ಮನೆಕೆಲಸ.
೨. ಸಾಹೇಬ್ ಪಟೇಲ್ ತಂದೆ ಲೇಟ್ ಹುಸೇನ್ ಪಟೇಲ್, ೫೦ ವರ್ಷ, ಉಃ ವ್ಯಾಪಾರ.
೩. ಲಾಲ್ ಪಟೇಲ್ ತಂದೆ ಲೇಟ್ ಹುಸೇನ್ ಪಟೇಲ್, ೩೭ ವರ್ಷ, ಉಃ ಒಕ್ಕಲುತನ.
೪. ನೂರನ್‌ಬೀ ತಂದೆ ಲೇಟ್ ಹುಸೇನ್ ಪಟೇಲ್, ೪೦ ವರ್ಷ, ಉಃ ಮನೆಕೆಲಸ.

೫. ಬೀಜಹನ್ ತಂದೆ ಲೇಟ್ ಹುಸೇನ್ ಪಟೇಲ್,
ಖ೮ ವರ್ಷ, ಉಃ ಮನೆಕೆಲಸ.
೬. ರಬನ್‌ಬೀ ತಂದೆ ಲೇಟ್ ಹುಸೇನ್ ಪಟೇಲ್,
ಖಂ ವರ್ಷ, ಉಃ ಮನೆಕೆಲಸ.
ಎಲ್ಲರ ವಾಸಃ ಹುಲಸಗುಡ್ ಗ್ರಾಮ, ಚಿಂಚೋಳಿ ತಾಲ್ಲೂಕ್, ಕಲಬುರಗಿ ಜಿಲ್ಲೆ.

(ಶ್ರೀ ಎಸ್.ಎಸ್.ಎ 2ನೇ ಪ್ರತಿವಾದಿ ಪರ ವಕೀಲರು. ೧, ೩ ರಿಂದ ೬ನೇ ಪ್ರತಿವಾದಿಯರು ಏಕಪಕ್ಷೀಯವಾಗಿರುತ್ತಾರೆ.)

| | | | |
|---|---|---|---|
| ೦೧. ದಾವೆ ದಾಖಲಿಸಿದ ದಿನಾಂಕ | ೧೪-೦೬-೨೦೧೩ | | |
| ೦೨. ದಾವೆಯ ಸ್ವರೂಪ | ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನತೆಗಾಗಿ ದಾವೆ. | | |
| ೦೩. ಸಾಕ್ಷಿಗಳ ವಿಚಾರಣೆ ದಿನಾಂಕ | ೧೫-೧೨-೨೦೧೫ | | |
| ೦೪. ತೀರ್ಪಿನ ದಿನಾಂಕ | ೧೧-೦೯-೨೦೧೮ | | |
| ೦೫. ಒಟ್ಟು ಕಾಲಾವಧಿ | ವರ್ಷ | ತಿಂಗಳು | ದಿನಗಳು |
| | ೦೫ | ೦೨ | ೨೮ |

(ಶ್ರೀ ಪ್ರೇಮ್‌ಕುಮಾರ್)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಚಿಂಚೋಳಿ.

## ತೀರ್ಪು

ವಾದಿಯರು ದಾವಾ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ಪ್ರತಿವಾದಿಯರ ವಿರುದ್ದ ಪಾಲುಗಾರಿಕೆ ಮತ್ತು ಪ್ರತ್ಯೇಕ ಸ್ವಾಧೀನತೆಗಾಗಿ ದಾವೆಯನ್ನು ಸಲ್ಲಿಸಿರುತ್ತಾರೆ.

**೨. ವಾದಿಯರ ದಾವೆಯ ಸಂಕ್ಷಿಪ್ತ ಸಾರಾಂಶಃ-**

ದಾವಾ ಸ್ವತ್ತುಗಳು ಚಿಂಚೋಳಿ ತಾಲ್ಲೂಕಿನ ಹುಲುಸಗೂಡ್ ಗ್ರಾಮದಲ್ಲಿರುವ ಸರ್ವೆ ನಂ.೪೫/ಎ ರಲ್ಲಿ ೫ ಎಕರೆ ೧೭ ಗುಂಟೆ ಜಮೀನು, ಸರ್ವೆ ನಂ.೧೭/೧ ರಲ್ಲಿರುವ ೫ ಎಕರೆ ೧೯ ಗುಂಟೆ ಜಮೀನು, ಸರ್ವೆ ನಂ.೧೬/೨ ರಲ್ಲಿರುವ ೨೮ ಗುಂಟೆ ಮತ್ತು ೩೭ ಗುಂಟೆ

ಜಮೀನುಗಳು ಹಾಗೂ ಸದರಿ ಗ್ರಾಮದಲ್ಲಿರುವ ಒಟ್ಟು ೧೨೦೦ ಫೀಟ್‌ನಲ್ಲಿರುವ ೩ ರೂಂಗಳು ಹಾಗೂ ಖಾಲಿ ಜಾಗ ದಾವಾ ಸ್ವತ್ತುಗಳಾಗಿರುತ್ತವೆ. ವಾದಿಯರು ಮತ್ತು ಪ್ರತಿವಾದಿಯರ ಮೂಲಕರ್ತ ಹುಸೇನ್‌ಪಟೇಲ್ ಆಗಿರುತ್ತಾರೆ. ಸದರಿ ಹುಸೇನ್‌ಪಟೇಲ್ ಹಲವು ವರ್ಷಗಳ ಹಿಂದೆಯೇ ವಾದಿಯರು ಮತ್ತು ಪ್ರತಿವಾದಿಯರನ್ನು ವಾರಸುದಾರರನ್ನಾಗಿ ಬಿಟ್ಟು ಮೃತಪಟ್ಟಿರುತ್ತಾರೆ. ಮೃತ ಹುಸೇನ್‌ಪಟೇಲ್ ರವರು ೩ ಜನ ಗಂಡು ಮಕ್ಕಳು ಹಾಗೂ ೩ ಜನ ಹೆಣ್ಣು ಮಕ್ಕಳು ಹಾಗೂ ಪತ್ನಿಯನ್ನು ಬಿಟ್ಟು ಮೃತಪಟ್ಟಿರುತ್ತಾರೆ. ೧ನೇ ವಾದಿಯು ಮೃತ ಹುಸೇನ್‌ಪಟೇಲ್ ರವರ ಸೊಸೆಯಾಗಿರುತ್ತಾರೆ. ಮೃತ ಸೈಯದ್‌ಪಟೇಲ್ ತಂದೆ ಹುಸೇನ್‌ಪಟೇಲ್ ರವರು ವಾದಿಯರನ್ನು ವಾರಸುದಾರರನ್ನಾಗಿ ಬಿಟ್ಟು ದಿನಾಂಕ:೦೭-೦೬-೨೦೦೬ ರಂದು ಮೃತಪಟ್ಟಿರುತ್ತಾರೆ. ದಾವಾ ಸ್ವತ್ತುಗಳು ವಾದಿಯರು ಮತ್ತು ಪ್ರತಿವಾದಿಯರ ಮಧ್ಯೆ ಪಾಲುಗಾರಿಕೆ ಆಗಿರುವುದಿಲ್ಲ. ಹುಸೇನ್‌ಪಟೇಲ್ ರವರು ಮೃತಪಟ್ಟ ನಂತರ ದಾವಾ ಸ್ವತ್ತುಗಳು ೧ನೇ ಪ್ರತಿವಾದಿ ಹಾಗೂ ಆನಂತರ ೨ ಮತ್ತು ೩ನೇ ಪ್ರತಿವಾದಿಯರಿಗೆ ನಾಮಮಾತ್ರಕ್ಕೆ ಮುಟೇಷನ್ ಆಗಿರುತ್ತದೆ. ದಾವಾ ಸ್ವತ್ತುಗಳು ೧ನೇ ವಾದಿಯ ಗಂಡ ಹಾಗೂ ಪ್ರತಿವಾದಿಯರ ನಡುವೆ ಯಾವುದೇ ಪಾಲುಗಾರಿಕೆ ಆಗಿರುವುದಿಲ್ಲ. ವಾದಿಯರು ಮತ್ತು ಪ್ರತಿವಾದಿಯರು ಮಹಮ್ಮದಿಯ ಕಾನೂನಿನ ಅಡಿಯಲ್ಲಿ ಬರುತ್ತಾರೆ. ವಾದಿಯರು ಮತ್ತು ಪ್ರತಿವಾದಿಯರು ದಾವಾ ಸ್ವತ್ತುಗಳಲ್ಲಿ ಸಮನಾಗಿ ೧/೭ನೇ ಭಾಗಾಂಶಕ್ಕೆ ಹಕ್ಕುದಾರರಾಗಿರುತ್ತಾರೆ.

೩. ವಾದಿಯರು ಮುಂದುವರೆದು ತಿಳಿಯಪಡಿಸಿರುವುದೇನೆಂದರೆ, ವಾದಿಯರು ಮಾರ್ಚ್-೨೦೧೩ ರಲ್ಲಿ ಪ್ರತಿವಾದಿಯರಿಗೆ ಭೇಟಿಯಾಗಿ ಪಾಲುಗಾರಿಕೆ ಮಾಡಿಕೊಳ್ಳಲು ಕೇಳಿರುತ್ತಾರೆ. ಆಗ ಪ್ರತಿವಾದಿಯರು ಒಪ್ಪಿಕೊಂಡಿದ್ದು, ನಂತರ ಮೇ-೨೦೧೩ ರಲ್ಲಿ ದಾವಾ ಸ್ವತ್ತುಗಳನ್ನು ಪಾಲುಗಾರಿಕೆ ಮಾಡಿಕೊಳ್ಳುವ ಸಂಬಂಧ ಪಂಚಾಯಿತಿ ಮಾಡಲಾಗಿ, ಪಂಚಾಯಿತಿಯವರು ದಾವಾ ಸ್ವತ್ತುಗಳಲ್ಲಿ ವಾದಿಯರಿಗೆ ಭಾಗಾಂಶ ನೀಡುವಂತೆ ತಿಳಿಸಲಾಗಿ, ಪ್ರತಿವಾದಿಯರು ಸಕಾರಣವಿಲ್ಲದೇ ಭಾಗಾಂಶ ನೀಡಲು ನಿರಾಕರಿಸಿರುತ್ತಾರೆ. ವಾದಿಯರಿಗೆ ಪ್ರತಿವಾದಿಯರು ದಿನಾಂಕ:೨೭-೦೫-೨೦೧೩ ರಲ್ಲಿ ಭಾಗಾಂಶ ನೀಡಲು ನಿರಾಕರಿಸಿದಾಗ ಈ ವ್ಯಾಜ್ಯ ಕಾರಣ ಉಂಟಾಗಿರುವುದಾಗಿ ತಿಳಿಸಿ, ವಾದಿಯರು

ಈ ದಾವೆಯನ್ನು ಸ್ವತ್ತುಗಳಲ್ಲಿ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೋರಿ ವಾದಪತ್ರವನ್ನು ಸಲ್ಲಿಸಿರುತ್ತಾರೆ.

೪. ವಾದಿಯರು ಸಲ್ಲಿಸಿರುವ ದಾವೆಯನ್ನು ದಾಖಲಿಸಿಕೊಂಡ ನಂತರ ಪ್ರತಿವಾದಿಯರಿಗೆ ಸಮನ್ಸ್ ನೀಡಲಾಗಿ, ಪ್ರತಿವಾದಿಯರಿಗೆ ಸಮನ್ಸ್ ಜಾರಿಯಾಗಿದ್ದು, ೧, ೩ ರಿಂದ ೬ನೇ ಪ್ರತಿವಾದಿಯರು ಗೈರು ಹಾಜರಿರುವ ಕಾರಣ ಏಕಪಕ್ಷೀಯ ಎಂದು ಪರಿಗಣಿಸಲಾಗಿದೆ. ೨ನೇ ಪ್ರತಿವಾದಿ ನ್ಯಾಯಾಲಯಕ್ಕೆ ವಕೀಲರ ಮೂಲಕ ಹಾಜರಾಗಿ ಪ್ರತಿವಾದಪತ್ರವನ್ನು ಸಲ್ಲಿಸಿರುತ್ತಾರೆ. ೨ನೇ ಪ್ರತಿವಾದಿ ತಮ್ಮ ಪ್ರತಿವಾದಪತ್ರದಲ್ಲಿ ವಾದಿಯರು ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ತಿಳಿಸಿರುವ ಚೆಕ್ಕುಬಂಧಿ ತಪ್ಪಿನಿಂದ ಕೂಡಿರುತ್ತದೆ. ವಾದಿಯರು ದಾವಾ ಸ್ವತ್ತಿನ ಸ್ವಾಧೀನದಿಂದ ಹೊರಗೆ ಇರುವುದರಿಂದ ಅವರಿಗೆ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ. ೨ನೇ ಪ್ರತಿವಾದಿ ತಮ್ಮ ಪ್ರತಿವಾದ ಪತ್ರದಲ್ಲಿ ಮುಂದುವರೆದು, ೧ನೇ ವಾದಿಯು ಮೃತ ಸೈಯದ್‌ಪಟೇಲ್ ರವರ ಕಾನೂನುಬದ್ದ ಪತ್ನಿಯಾಗಿರುತ್ತಾಳೆ ಎಂಬುದು ಸುಳ್ಳಿನಿಂದ ಕೂಡಿದ್ದಾಗಿರುತ್ತದೆ. ಸದರಿ ಸೈಯದ್‌ಪಟೇಲ್ ರವರು ೧ನೇ ವಾದಿಯನ್ನು ೧೯೯೪ ರಿಂದ ತ್ಯಜಿಸಿರುತ್ತಾರೆ. ಅಂದಿನಿಂದ ಪ್ರತಿವಾದಿಯ ಕುಟುಂಬದಿಂದ ಪ್ರತ್ಯೇಕವಾಗಿ ವಾಸವಾಗಿರುತ್ತಾರೆ, ವಾದಿಯರು ದಾವಾ ಸ್ವತ್ತಿನ ಜಂಟೀ ಸ್ವಾಧೀನಾನುಭವವನ್ನು ಹೊಂದಿರುವುದಿಲ್ಲ. ಸದರಿ ಮೃತ ಸೈಯದ್‌ಪಟೇಲ್ ರವರು ಖುರ್ಷಿದಬೇಗಂ ಎನ್ನುವವರನ್ನು ಮದುವೆಯಾಗಿರುತ್ತಾರೆ. ಆಕೆ ಆತನ ವಾರಸುದಾರರಾಗಿ ಜೀವಂತ ಇರುತ್ತಾರೆ. ಸದರಿ ಖುರ್ಷಿದಬೇಗಂ ಸರ್ವೆ ನಂ.೧೬/೨ ಮತ್ತು ೧೭/೧ ರ ಸ್ವತ್ತಿನಲ್ಲಿ ೩೭ ಗುಂಟೆ ಜಮೀನನ್ನು ವಾರಸುದಾರರಾಗಿ ಪಡೆದಿರುತ್ತಾರೆ. ಆದ್ದರಿಂದ ಸದರಿ ದಾವೆ ಅವಶ್ಯಕ ಪಕ್ಷಗಾರರನ್ನು ಒಳಗೊಂಡಿಲ್ಲದೇ ಇರುವುದರಿಂದ ವಜಾಗೊಳ್ಳಲು ಯೋಗ್ಯವಾಗಿರುತ್ತದೆ. ದಾವಾ ಸ್ವತ್ತುಗಳು ಪಾಲುಗಾರಿಕೆ ಆಗಿರುವುದಿಲ್ಲ ಎಂಬುದಾಗಿ ತಿಳಿಸಿರುವುದು ಸುಳ್ಳಿನಿಂದ ಕೂಡಿದ್ದಾಗಿರುತ್ತದೆ. ದಾವಾ ಸ್ವತ್ತುಗಳು ಈಗಾಗಲೇ ೨೦೦೭ ರಲ್ಲಿ ಪ್ರತಿವಾದಿಯರ ನಡುವೆ ಮೌಖಿಕವಾಗಿ ಪಾಲುಗಾರಿಕೆಯಾಗಿ ದಿನಾಂಕಃ ೨೧-೦೮-೨೦೦೭ ರಂದು ಪಾಲುಗಾರಿಕೆ ಪ್ರಕಾರ ಮುಟೇಷನ್ ಆಗಿರುತ್ತದೆ. ವಾದಿಯರು ದಾವಾ ಸ್ವತ್ತುಗಳಲ್ಲಿ ಪಾಲುದಾರರು (Sharer) ಅಥವಾ ಉಳಿಕೆ ಆಸ್ತಿಯ ವಾರಸುದಾರರು (Residuary) ಆಗಿರುವುದಿಲ್ಲ. ಆದ್ದರಿಂದ

ವಾದಿಯರ ಪಾಲುಗಾರಿಕೆ ದಾವೆ ಕಾನೂನಿನಡಿ ಊರ್ಜಿತವಾಗಿರುವುದಿಲ್ಲ. ವಾದಿಯರು ತಮ್ಮ ವಾದಪತ್ರದಲ್ಲಿ ತಿಳಿಸಿರುವಂತೆ ಪಾಲುಗಾರಿಕೆಗೆ ಹಕ್ಕುದಾರರಾಗಿರುವುದಿಲ್ಲ. ವಾದಿಯರು ಪ್ರತಿವಾದಿಯರ ಬಳಿ ಮಾರ್ಚ್-೨೦೧೩, ಮೇ-೨೦೧೩ ರಂದು ಪಾಲುಗಾರಿಕೆಗಾಗಿ ಕೇಳಲಾಗಿ ಆ ಸಂದರ್ಭದಲ್ಲಿ ಪ್ರತಿವಾದಿಯರು ನಿರಾಕರಿಸಿರುತ್ತಾರೆಂಬುದಾಗಿ ತಿಳಿಸಿರುವುದು ಸುಳ್ಳಿನಿಂದ ಕೂಡಿದ್ದಾಗಿರುತ್ತದೆ. ವಾದಿಯರು ವ್ಯಾಜ್ಯಕಾರಣವನ್ನು ತಿಳಿಸಿರುವುದಕ್ಕೆ ಯಾವುದೇ ಆದಾರ ಇರುವುದಿಲ್ಲ. ಹಾಗೇ ದಾವೆಗೆ ಸಂಬಂಧಿಸಿದಂತೆ ಪಾವತಿ ಮಾಡಿರುವ ನ್ಯಾಯಾಲಯದ ಶುಲ್ಕ ಸಮರ್ಪಕವಾಗಿರುವುದಿಲ್ಲ ಎಂಬುದಾಗಿ ಪ್ರತಿವಾದವನ್ನು ತಳೆದಿರುತ್ತಾರೆ.

೫. ೨ನೇ ಪ್ರತಿವಾದಿ ತಮ್ಮ ಪ್ರತಿವಾದಪತ್ರದಲ್ಲಿ ಪ್ರತ್ಯೇಕ ವಾದವನ್ನು ತಳೆದಿರುತ್ತಾರೆ. ವಾದಿಯರ ದಾವೆ ಕಾಲಮಿತಿ ಮೀರಿದ ದಾವೆಯಾಗಿರುತ್ತದೆ. ಹಾಗೂ ಅವಶ್ಯಕ ಪಕ್ಷಗಾರರನ್ನು ಒಳಗೊಂಡಿರುವುದಿಲ್ಲ. ಮತ್ತು ವಾದಿಯರು ಕೋರಿರುವ ಭಾಗಾಂಶ ಮಹಮ್ಮದಿಯ ಕಾನೂನಿನ ಪ್ರಕಾರ ಇರುವುದಿಲ್ಲ. ಆದ್ದರಿಂದ ವಾದಿಯರ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಬೇಕಾಗಿ ಕೋರಿ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ.

೬. ವಾದಿಯರು ತಮ್ಮ ವಾದವನ್ನು ರುಜುವಾತುಪಡಿಸಲು ೧ನೇ ವಾದಿ ತಮ್ಮನ್ನು ತಾವು ಪಿ.ಡಬ್ಲ್ಯೂ-೧ ಎಂದು ಸಾಕ್ಷಿ ವಿಚಾರಣೆಗೆ ಒಳಪಡಿಸಿಕೊಂಡು, ತಮ್ಮ ಪರವಾಗಿ ೨೩ ದಾಖಲೆಗಳನ್ನು ಹಾಜರುಪಡಿಸಿಕೊಂಡು ನಿಶಾನೆ ಪಿ-೧ ರಿಂದ ೨೩ ಎಂದು ಗುರ್ತಿಸಿಕೊಂಡಿರುತ್ತಾರೆ. ೨ನೇ ಪ್ರತಿವಾದಿಯು ತಮ್ಮನ್ನು ತಾವು ಡಿಡಬ್ಲೂ-೧ ಎಂದು ಸಾಕ್ಷಿ ವಿಚಾರಣೆಗೆ ಒಳಪಡಿಸಿಕೊಂಡಿದ್ದು, ತಮ್ಮ ಪರವಾಗಿ ೫ ದಾಖಲೆಗಳನ್ನು ಹಾಜರುಪಡಿಸಿಕೊಂಡು ನಿಶಾನೆ ಡಿ-೧ ರಿಂದ ೫ ಎಂದು ಗುರ್ತಿಸಿಕೊಂಡಿರುತ್ತಾರೆ.

೭. ವಾದಿಯರು ಮತ್ತು ಪ್ರತಿವಾದಿಯರ ವಾದವನ್ನು ಆಲಿಸಲಾಯಿತು. ಮತ್ತು ಲಭ್ಯವಿರುವ ಎಲ್ಲಾ ಸಾಕ್ಷ್ಯಧಾರಗಳನ್ನು ಪರಿಶೀಲಿಸಲಾಯಿತು.

**ಆ.** ಈ ಕೆಳಕಂಡ ಅಂಶಗಳು ನನ್ನ ಅವಗಹನೆಗೆ ಉದ್ಭವಿಸಿದೆ-

***ISSUES***

***1.Whether plaintiffs prove that they have succeeded to suit schedule properties after death of Syed S/o Hussain Patel as tenents in common and there are joint possession and enjoyment of the same?***

***2. Whether defendant No.2 proves that plaintiffs are ousted from suit schedule properties?***

***3. Whether suit is bad for non-joinder of ncecessary parties?***

***4. Whether defendant No.2 proves that the relief claimed by plaintiffs is not in accordance with Muslim inheritance Law?***

***5. Whether suit is barred by limitation?***

***6. Whether the plaintiffs are entitled for relief sought?***

***7. What order or decree?***

೯. ಮೇಲೆ ಹೇಳಿದ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಲಾಗಿದೆ-

**ವಿವಾದಾಂಶ-೧: ಸಕಾರಾತ್ಮಕವಾಗಿ**

**ವಿವಾದಾಂಶ-೨: ನಕಾರಾತ್ಮಕವಾಗಿ**

**ವಿವಾದಾಂಶ-೩: ನಕಾರಾತ್ಮಕವಾಗಿ**

**ವಿವಾದಾಂಶ-೪: ಸಕಾರಾತ್ಮಕವಾಗಿ**

**ವಿವಾದಾಂಶ-೫: ನಕಾರಾತ್ಮಕವಾಗಿ**

**ವಿವಾದಾಂಶ-೬: ಬಾಗಶಃ ಸಕಾರಾತ್ಮಕವಾಗಿ**

**ವಿವಾದಾಂಶ-೭: ಈ ಕೆಳಕಂಡ ಕಾರಣಗಳ ಮೇರೆಗೆ ಅಂತಿಮ ಆದೇಶ**

## ಕಾ ರ ಣ ಗ ಳು

**೧೦. ವಿವಾದಾಂಶ-೧ ಮತ್ತು ೨:** ವಿವಾದಾಂಶ-೧ ಮತ್ತು ೨ ಒಂದಕ್ಕೊಂದು ಪೂರಕವಾಗಿರುವುದರಿಂದ ಸಂಗತಿಗಳ ಪುನರಾವರ್ತನೆ ತಪ್ಪಿಸುವ ಸಲುವಾಗಿ ಒಟ್ಟಿಗೆ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.

ವಾದಿಯರ ವಾದಕ್ಕೆ ಅನುಸಾರವಾಗಿ ವಾದಿಯರ ದಾವೆಯ ಸ್ವರೂಪವನ್ನು ಪರಿಶೀಲಿಸಿ ನೋಡಲಾಗಿ, ವಾದಿಯರು ಪ್ರಸ್ತುತ ದಾವೆಯನ್ನು ಪ್ರತಿವಾದಿಯರ ವಿರುದ್ದ ದಾವಾ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ಪಾಲುಗಾರಿಕೆ ಹಾಗೂ ಪ್ರತ್ಯೇಕ ಸ್ವಾಧೀನತೆಗಾಗಿ ಸಲ್ಲಿಸಿರುತ್ತಾರೆ. ವಾದಿಯರು ತಮ್ಮ ವಾದದಲ್ಲಿ ವಾದಿಯರು ಮತ್ತು ಪ್ರತಿವಾದಿಯರ ಮೂಲಕರ್ತ ಹುಸೇನ್‌ಪಟೇಲ್ ಆಗಿರುತ್ತಾರೆ. ಸದರಿ ಹುಸೇನ್‌ಪಟೇಲ್ ಹಲವು ವರ್ಷಗಳ ಹಿಂದೆಯೇ ವಾದಿಯರು ಮತ್ತು

ಪ್ರತಿವಾದಿಯರನ್ನು ವಾರಸುದಾರರನ್ನಾಗಿ ಬಿಟ್ಟು ಮೃತಪಟ್ಟಿರುತ್ತಾರೆ. ಮೃತ ಹುಸೇನ್‌ಪಟೇಲ್ ರವರು ೩ ಜನ ಗಂಡು ಮಕ್ಕಳು ಹಾಗೂ ೩ ಜನ ಹೆಣ್ಣು ಮಕ್ಕಳು ಹಾಗೂ ಪತ್ನಿಯನ್ನು ಬಿಟ್ಟು ಮೃತಪಟ್ಟಿರುತ್ತಾರೆ. ೧ನೇ ವಾದಿಯು ಮೃತ ಹುಸೇನ್‌ಪಟೇಲ್ ರವರ ಸೊಸೆಯಾಗಿರುತ್ತಾರೆ. ಮೃತ ಸೈಯದ್‌ಪಟೇಲ್ ತಂದೆ ಹುಸೇನ್‌ಪಟೇಲ್ ರವರು ವಾದಿಯರನ್ನು ವಾರಸುದಾರರನ್ನಾಗಿ ಬಿಟ್ಟು ದಿನಾಂಕ:೦೭-೦೬-೨೦೦೬ ರಂದು ಮೃತಪಟ್ಟಿರುತ್ತಾರೆ. ದಾವಾ ಸ್ವತ್ತುಗಳು ವಾದಿಯರು ಮತ್ತು ಪ್ರತಿವಾದಿಯರ ಮಧ್ಯೆ ಪಾಲುಗಾರಿಕೆ ಆಗಿರುವುದಿಲ್ಲ. ಹುಸೇನ್‌ಪಟೇಲ್ ರವರು ಮೃತಪಟ್ಟ ನಂತರ ದಾವಾ ಸ್ವತ್ತುಗಳು ೧ನೇ ಪ್ರತಿವಾದಿ ಹಾಗೂ ಆನಂತರ ೨ ಮತ್ತು ೩ನೇ ಪ್ರತಿವಾದಿಯರಿಗೆ ನಾಮಮಾತ್ರಕ್ಕೆ ಮುಟೇಷನ್ ಆಗಿರುತ್ತದೆ. ದಾವಾ ಸ್ವತ್ತುಗಳು ೧ನೇ ವಾದಿಯ ಗಂಡ ಹಾಗೂ ಪ್ರತಿವಾದಿಯರ ನಡುವೆ ಯಾವುದೇ ಪಾಲುಗಾರಿಕೆ ಆಗಿರುವುದಿಲ್ಲ. ವಾದಿಯರು ಮತ್ತು ಪ್ರತಿವಾದಿಯರು ಮಹಮ್ಮದಿಯ ಕಾನೂನಿನ ಅಡಿಯಲ್ಲಿ ಬರುತ್ತಾರೆ. ವಾದಿಯರು ಮತ್ತು ಪ್ರತಿವಾದಿಯರು ದಾವಾ ಸ್ವತ್ತುಗಳಲ್ಲಿ ಸಮನಾಗಿ ೧/೭ ನೇ ಭಾಗಾಂಶಕ್ಕೆ ಹಕ್ಕುದಾರರಾಗಿರುತ್ತಾರೆ ಎಂಬುದಾಗಿ ವಾದವನ್ನು ತಳೆದಿರುತ್ತಾರೆ. ವಾದಿಯರ ವಾದಕ್ಕೆ ಪ್ರತಿಯಾಗಿ ೨ ನೇ ಪ್ರತಿವಾದಿಯು ತಮ್ಮ ಪ್ರತಿವಾದದಲ್ಲಿ ವಾದಿಯರು ದಾವಾ ಸ್ವತ್ತಿನ ಸ್ವಾಧೀನದಿಂದ ಹೊರಗೆ ಇರುವುದರಿಂದ ಅವರಿಗೆ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ. ೧ನೇ ವಾದಿಯು ಮೃತ ಸೈಯದ್‌ಪಟೇಲ್ ರವರ ಕಾನೂನುಬದ್ದ ಪತ್ನಿಯಾಗಿರುತ್ತಾಳೆ ಎಂಬುದು ಸುಳ್ಳಿನಿಂದ ಕೂಡಿದ್ದಾಗಿರುತ್ತದೆ. ಸದರಿ ಸೈಯದ್‌ಪಟೇಲ್ ರವರು ೧ನೇ ವಾದಿಯನ್ನು ೧೯೯೯ ರಿಂದ ತ್ಯಜಿಸಿರುತ್ತಾರೆ. ಅಂದಿನಿಂದ ಪ್ರತಿವಾದಿಯರ ಕುಟುಂಬದಿಂದ ಪ್ರತ್ಯೇಕವಾಗಿ ವಾಸವಾಗಿರುತ್ತಾರೆ, ವಾದಿಯರು ದಾವಾ ಸ್ವತ್ತಿನ ಜಂಟೀ ಸ್ವಾಧೀನಾನುಭವವನ್ನು ಹೊಂದಿರುವುದಿಲ್ಲ. ಸದರಿ ಮೃತ ಸೈಯದ್‌ಪಟೇಲ್ ರವರು ಖುರ್ಷಿದಬೇಗಂ ಎನ್ನುವವರನ್ನು ಮದುವೆಯಾಗಿರುತ್ತಾರೆ. ಆಕೆ ಆತನ ವಾರಸುದಾರರಾಗಿ ಜೀವಂತ ಇರುತ್ತಾರೆ. ಸದರಿ ಖುರ್ಷಿದಬೇಗಂ ಸರ್ವೆ ನಂ.೧೬/೨ ಮತ್ತು ೧೭/೧ ರ ಸ್ವತ್ತಿನಲ್ಲಿ ೩೭ ಗುಂಟೆ ಜಮೀನನ್ನು ವಾರಸುದಾರರಾಗಿ ಪಡೆದಿರುತ್ತಾರೆ. ಆದ್ದರಿಂದ ಸದರಿ ದಾವೆ ಅವಶ್ಯಕ ಪಕ್ಷಗಾರರನ್ನು ಒಳಗೊಂಡಿಲ್ಲದೇ ಇರುವುದರಿಂದ ವಜಾಗೊಳ್ಳಲು ಯೋಗ್ಯವಾಗಿರುತ್ತದೆ. ದಾವಾ ಸ್ವತ್ತುಗಳು ಪಾಲುಗಾರಿಕೆ ಆಗಿರುವುದಿಲ್ಲ

ಎಂಬುದಾಗಿ ತಿಳಿಸಿರುವುದು ಸುಳ್ಳಿನಿಂದ ಕೂಡಿದ್ದಾಗಿರುತ್ತದೆ. ದಾವಾ ಸ್ವತ್ತುಗಳು ಈಗಾಗಲೇ ೨೦೦೭ ರಲ್ಲಿ ಪ್ರತಿವಾದಿಯರ ನಡುವೆ ಮೌಖಿಕವಾಗಿ ಪಾಲುಗಾರಿಕೆಯಾಗಿ ದಿನಾಂಕಃ ೨೧-೦೮-೨೦೦೭ ರಂದು ಪಾಲುಗಾರಿಕೆ ಪ್ರಕಾರ ಮುಟೇಷನ್ ಆಗಿರುತ್ತದೆ. ವಾದಿಯರು ದಾವಾ ಸ್ವತ್ತುಗಳಲ್ಲಿ ಪಾಲುದಾರರು (Sharer) ಅಥವಾ ಉಳಿಕೆ ಆಸ್ತಿಯ ವಾರಸುದಾರರು (Residuary) ಆಗಿರುವುದಿಲ್ಲ. ಆದ್ದರಿಂದ ವಾದಿಯರ ಪಾಲುಗಾರಿಕೆ ದಾವೆ ಕಾನೂನಿನಡಿ ಊರ್ಜಿತವಾಗಿರುವುದಿಲ್ಲ. ವಾದಿಯರು ತಮ್ಮ ವಾದಪತ್ರದಲ್ಲಿ ತಿಳಿಸಿರುವಂತೆ ಪಾಲುಗಾರಿಕೆಗೆ ಹಕ್ಕುದಾರರಾಗಿರುವುದಿಲ್ಲ ಎಂಬುದಾಗಿ ಪ್ರತಿವಾದವನ್ನು ತಳೆದಿರುತ್ತಾರೆ.

೧೧. ವಾದಿಯರು ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಜಂಟಿ ಭೂ-ಗೇಣಿದಾರರಾಗಿ ಸ್ವಾಧೀನಾನುಭವವನ್ನು ಹೊಂದಿರುವುದರಿಂದ ಭಾಗಾಂಶಕ್ಕೆ ಹಕ್ಕುದಾರರಾಗಿರುವುದಾಗಿ ರುಜುವಾತುಪಡಿಸಿರುವರೇ ಎಂಬುದಾಗಿ ಪರಿಶೀಲಿಸಲಾಗಿ ೧ ನೇ ವಾದಿಯು ತಮ್ಮನ್ನು ತಾವು ಪಿ.ಡಬ್ಲ್ಯು-೧ ಎಂದು ಸಾಕ್ಷಿ ವಿಚಾರಣೆಗೆ ಒಳಪಡಿಸಿಕೊಂಡು ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ವಾದ ಪತ್ರದಲ್ಲಿ ತಿಳಿಸಿರುವ ಅಂಶಗಳನ್ನು ಯಥಾವತ್ತಾಗಿ ತಿಳಿಸಿರುತ್ತಾರೆ. ವಾದಿಯು ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಜಂಟಿ ಗೇಣಿದಾರರಾಗುವ ಮೂಲಕ ದಾವಾ ಸ್ವತ್ತಿನ ಮಾಲೀಕತ್ವದ ಹಕ್ಕನ್ನು ಹೊಂದಿರುವುದಾಗಿ ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ಸ್ವತಂತ್ರ ಸಾಕ್ಷಿದಾರರ ಸಾಕ್ಷ್ಯದ ಮೂಲಕ ತಮ್ಮ ವಾದವನ್ನು ರುಜುವಾತುಪಡಿಸಿರುವರೇ ಎಂಬುದಾಗಿ ಪರಿಶೀಲಿಸಲಾಗಿ ವಾದಿಯು ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ಯಾವುದೇ ಸಾಕ್ಷಿದಾರರನ್ನು ಸಾಕ್ಷಿ ವಿಚಾರಣೆಗೆ ಒಳಪಡಿಸಿಕೊಳ್ಳದೇ ಇರುವುದು ಕಂಡುಬರುತ್ತದೆ.

೧೨. ವಾದಿಯು ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ದಾಖಲಾತಿಗಳನ್ನು ಹಾಜರುಪಡಿಸಿ ದಾವಾ ಸ್ವತ್ತಿನ ಜಂಟಿ ಸ್ವಾಧೀನದಾರರು ಹಾಗೂ ಮಾಲೀಕತ್ವದ ಹಕ್ಕನ್ನು ಹೊಂದಿರುವುದಾಗಿ ರುಜುವಾತುಪಡಿಸಿರುವರೇ ಎಂಬುದಾಗಿ ಪರಿಶೀಲಿಸಲಾಗಿ ವಾದಿ ತಮ್ಮ ಪರ ೨೩ ದಾಖಲೆಗಳನ್ನು ಹಾಜರುಪಡಿಸಿ, ನಿಪಿ-೧ ರಿಂದ ೨೩ ಎಂದು ಗುರುತಿಸಿಕೊಂಡಿರುತ್ತಾರೆ. ಸದರಿ ದಾಖಲೆಗಳನ್ನು

ಪರಿಗಣಿಸಿದರೆ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಹಕ್ಕುದಾರರಾಗಿ ಜಂಟಿ ಸ್ವಾಧೀನಾನುಭವವನ್ನು ಹೊಂದಿರುವುದಾಗಿ ರುಜುವಾತಾಗಿದೆಯೇ ಎಂಬುದಾಗಿ ಪರಿಶೀಲಿಸಲಾಗಿ ವಾದಿಯರು ಸಲ್ಲಿಸಿರುವ ನಿಪಿ-೧ ರಿಂದ ೨೩ ದಾಖಲೆಗಳು ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟ ಪಹಣಿ ಪತ್ರಿಕೆಗಳು ಹಾಗೂ ಮುಟೇಷನ್ ಪ್ರತಿಗಳಾಗಿರುತ್ತವೆ. ದಾವಾ ಸ್ವತ್ತುಗಳು ಮೃತ ಹುಸೇನ್‌ಪಟೇಲ್‌ರವರಿಂದ ೧ ನೇ ಪ್ರತಿವಾದಿಯ ಹೆಸರಿಗೆ ಹಕ್ಕುಬದಲಾವಣೆ ಆಗಿರುವುದು ನಿಪಿ-೪ ಮುಟೇಷನ್ ದಾಖಲೆಯಿಂದ ಕಂಡುಬರುತ್ತದೆ. ನಂತರ ದಾವಾ ಸ್ವತ್ತುಗಳು ೧ ಮತ್ತು ೨ ನೇ ಪ್ರತಿವಾದಿಯರಿಗೆ ವರ್ಗಾವಣೆ ಆಗಿರುವುದು ಕಂಡುಬರುತ್ತವೆ. ಪ್ರಸ್ತುತ ದಾವಾ ಸ್ವತ್ತುಗಳು ೧ ರಿಂದ ೩ ನೇ ಪ್ರತಿವಾದಿಯರ ಹೆಸರಿನಲ್ಲಿ ಸ್ವಾಧೀನದಾರರು ಹಾಗೂ ವ್ಯವಸಾಯಗಾರರ ಕಾಲಂನಲ್ಲಿ ನಮೂದು ಇರುವುದು ಕಂಡುಬರುತ್ತದೆ. ನಿಪಿ-೧ ರಿಂದ ೨೩ ದಾಖಲೆಗಳನ್ನು ಪರಿಗಣಿಸಿದರೆ ದಾವಾ ಸ್ವತ್ತುಗಳು ಮೃತ ಹುಸೇನ್‌ಪಟೇಲ್‌ರವರಿಂದ ೧ ರಿಂದ ೩ ನೇ ಪ್ರತಿವಾದಿಯರ ಹೆಸರಿಗೆ ವರ್ಗಾವಣೆಯಾಗಿರುವುದು ಕಂಡುಬರುತ್ತದೆ.

೧೩. ೨ನೇ ಪ್ರತಿವಾದಿಯು ತಮ್ಮ ಪ್ರತಿವಾದದಲ್ಲಿ ವಾದಿಯರು ದಾವಾ ಸ್ವತ್ತಿನ ಸ್ವಾಧೀನದಿಂದ ಬೇರ್ಪಟ್ಟಿರುತ್ತಾರೆ ಹಾಗೂ ವಾದಿಯರು ಮೃತ ಸೈಯದ್‌ಪಟೇಲ್‌ರವರಿಂದ ೧೯೯೯ ರಿಂದಲೇ ಬೇರ್ಪಟ್ಟು ಪ್ರತ್ಯೇಕವಾಗಿ ವಾಸಮಾಡುತ್ತಿರುವುದರಿಂದ ದಾವಾ ಸ್ವತ್ತುಗಳ ಸ್ವಾಧೀನದಲ್ಲಿರುವುದಿಲ್ಲ, ವಾದಿಯರು ದಾವಾ ಸ್ವತ್ತಿಗೆ ಪಾಲುದಾರರು (Sharer) ಅಥವಾ ಉಳಿಕೆ ಆಸ್ತಿಯ ವಾರಸುದಾರರು (Residuary) ಆಗಿರುವುದಿಲ್ಲ, ಆದ್ದರಿಂದ ವಾದಿಯ ಪಾಲುಗಾರಿಕೆ ದಾವೆ ಕಾನೂನಿನಡಿ ಊರ್ಜಿತವಾಗಿರುವುದಿಲ್ಲ ಎಂಬುದಾಗಿ ತಳೆದಿರುವ ಪ್ರತಿವಾದವನ್ನು ರುಜುವಾತುಪಡಿಸಿರುವರೇ ಎಂಬುದಾಗಿ ಪರಿಶೀಲಿಸಲಾಗಿ, ೨ನೇ ಪ್ರತಿವಾದಿ ತಮ್ಮನ್ನು ತಾವು ಡಿ.ಡಬ್ಲು-೧ ಎಂದು ಸಾಕ್ಷಿ ವಿಚಾರಣೆ ಒಳಪಡಿಸಿಕೊಂಡು ತಮ್ಮ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಪ್ರತಿವಾದ ಪತ್ರದಲ್ಲಿ ತಿಳಿಸಿರುವ ಅಂಶಗಳನ್ನು ಯಥಾವತ್ತಾಗಿ ತಿಳಿಸಿರುತ್ತಾರೆ ಹಾಗೂ ಸೈಯದ್‌ಪಟೇಲ್‌ರವರು ತನ್ನ ತಂದೆಯಾದ ಹುಸೇನ್‌ಪಟೇಲ್‌ರವರ ಜೀವಿತಾವಧಿಯಲ್ಲಿ ಮೃತಪಟ್ಟಿರುತ್ತಾನೆ. ಆದ್ದರಿಂದ ವಾದಿಯರು ಸೈಯದ್‌ಪಟೇಲ್‌ರವರ ವಾರಸುದಾರರಾಗಿರುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ.

೧೪. ೨ನೇ ಪ್ರತಿವಾದಿಯು ತನ್ನ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ದಾಖಲೆಗಳನ್ನು ಸಲ್ಲಿಸಿ ವಾದಿಯರು ದಾವಾ ಷೆಡ್ಯೂಲ್ ಸ್ವತ್ತಿನ ಜಂಟಿ ಸ್ವಾಧೀನದಾರರು ಹಾಗೂ ಹಕ್ಕುದಾರರು ಆಗಿರುವುದಿಲ್ಲ ಎಂಬುದಾಗಿ ರುಜುವಾತುಪಡಿಸಿರುವರೇ ಎಂಬುದಾಗಿ ಪರಿಶೀಲಿಸಲಾಗಿ ಪ್ರತಿವಾದಿಯು ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ೫ ದಾಖಲೆಗಳನ್ನು ಹಾಜರುಪಡಿಸಿ ಗುರುತಿಸಿಕೊಂಡಿರುತ್ತಾರೆ. ಸದರಿ ದಾಖಲೆಗಳು ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟ ಪಹಣಿ ಪತ್ರಿಕೆ ಹಾಗೂ ಮುಟೇಷನ್ ಪ್ರತಿಯಾಗಿರುತ್ತವೆ. ಸದರಿ ದಾಖಲೆಗಳಿಂದ ದಾವಾ ಸ್ವತ್ತುಗಳು ೨ ಮತ್ತು ೩ ನೇ ಪ್ರತಿವಾದಿಯರು ಹಾಗೂ ಖುರ್ಷಿದಾ ಬೇಗಂ ರವರ ಹೆಸರಿಗೆ ಸ್ವತ್ತುಗಳು ವರ್ಗಾವಣೆಯಾಗಿ ನಮೂದು ಇರುವುದು ಕಂಡುಬರುತ್ತದೆ.

೧೫. ವಾದಿಯರು ಮತ್ತು ಪ್ರತಿವಾದಿಯರ ವಾದ ಮತ್ತು ಪ್ರತಿವಾದಗಳನ್ನು ಪರಿಗಣಿಸಿ ವಾರಸುದಾರಿಕೆಯ ಬಗ್ಗೆ ಮಹಮದ್ದೀಯ ಕಾನೂನಿನಲ್ಲಿ ಕಲಂ **16 Birth-right not recognised,**The right of an heir-apparent or presumptive comes into existence for the first time on the death of the ancestor, and he is not entitled until then to any interest in the property to which he would succeed as an heir if he survived the ancestor ಎಂದು ತಿಳಿಸಿರುವ ನಿಯಮವನ್ನು ಪರಿಗಣಿಸಿ ೧ ನೇ ಪ್ರತಿವಾದಿಯ ಪತಿಯಾದ ಹಾಗೂ ೨ ನೇ ವಾದಿಯ ತಂದೆಯಾದ ಸೈಯದ್‌ಪಟೇಲ್‌ರವರು ಹುಸೇನ್‌ಪಟೇಲ್‌ರವರ ಮರಣದ ನಂತರ ಆತನ ವಾರಸುದಾರರಾಗಿ ದಾವಾ ಸ್ವತ್ತುಗಳಲ್ಲಿ ಹಕ್ಕು ಪಡೆದುಕೊಂಡಿರುವರು ಎಂಬುದಾಗಿ ರುಜುವಾತುಪಡಿಸಿರುವರೇ ಎಂಬುದಾಗಿ ಪರಿಶೀಲಿಸಿ ನೋಡಲಾಗಿ ವಾದಿಯರು ತಮ್ಮ ವಾದ ಪತ್ರದಲ್ಲಿ ಹಾಗೂ ತಮ್ಮ ವಾದದಲ್ಲಿ ಮೃತ ಹುಸೇನ್‌ಪಟೇಲ್‌ರವರು ಹಲವು ವರ್ಷಗಳ ಹಿಂದೆಯೇ ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ. ಹಾಗೆಯೇ ೧ ನೇ ವಾದಿಯ ಪತಿಯಾದ ಸೈಯದ್‌ಪಟೇಲ್‌ರವರು ದಿನಾಂಕ ೦೭-೦೬-೨೦೦೬ ರಂದು ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ. ವಾದಿಯರು ತಮ್ಮ ವಾದ ಪತ್ರದಲ್ಲಿ ಹಾಗೂ ತಮ್ಮ ಸಾಕ್ಷ್ಯದಲ್ಲಿ ಸ್ಪಷ್ಟವಾಗಿ ಮೃತ

ಸೈಯದ್‌ಪಟೇಲ್ ರವರು ತನ್ನ ತಂದೆಯ ಮರಣದ ಸಮಯದಲ್ಲಿ ಜೀವಂತವಾಗಿದ್ದರು ಎಂಬುದಾಗಿ ಸ್ಪಷ್ಟವಾಗಿ ತಿಳಿಸದೇ ಇರುವುದು. ಹಾಗೆಯೇ ಹುಸೇನ್‌ಪಟೇಲ್‌ರವರು ಯಾವಾಗ ಮೃತಪಟ್ಟಿರುತ್ತಾರೆ ಎಂಬ ಬಗ್ಗೆ ಸ್ಪಷ್ಟವಾಗಿ ಇಬ್ಬರು ಪಕ್ಷಗಾರರು ತಮ್ಮ ವಾದ ಪತ್ರದಲ್ಲಿ ಮತ್ತು ಪ್ರತಿವಾದ ಪತ್ರದಲ್ಲಿ ತಿಳಿಸದೇ ಇರುವುದು ಕಂಡುಬರುತ್ತದೆ.

೧೬. ವಾದಿಯರು ಮತ್ತು ಪ್ರತಿವಾದಿಯರ ವಾದ ಮತ್ತು ಪ್ರತಿವಾದಗಳನ್ನು ಪರಿಗಣಿಸಿ, ೧ ನೇ ವಾದಿಯ ಪತಿಯಾದ ಸೈಯದ್‌ಪಟೇಲ್‌ರವರು ಮೃತ ಹುಸೇನ್‌ಪಟೇಲ್‌ರವರ ಮರಣ ನಂತರ ಅವರ ವಾರಸುದಾರರಾಗಿ ಹಕ್ಕು ಪಡೆದುಕೊಂಡಿರುವರೇ ಎಂಬುದಾಗಿ ಪರಿಗಣಿಸಲು ಪಕ್ಷಗಾರರ ಮೌಖಿಕ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿ, ಡಿಡಬ್ಲ್ಯೂ-೧ ರವರು ತಮ್ಮ ಪಾಟೀ ಸವಾಲಿನಲ್ಲಿ "ನನ್ನ ತಮ್ಮ ಸೈಯದ್‌ಪಟೇಲ್ ನನ್ನ ತಂದೆ ತೀರಿಕೊಳ್ಳುವ ಪೂರ್ವದಲ್ಲಿ ಮೃತಪಟ್ಟಿದ್ದಾನೆ." ಎಂದು ಸಾಕ್ಷ್ಯ ನುಡಿದಿರುವುದನ್ನು ಪರಿಗಣಿಸಿ, ವಾದಿಯ ಪರ ಮೌಖಿಕ ಸಾಕ್ಷ್ಯವನ್ನು ಪರಿಶೀಲಿಸಲಾಗಿ, ವಾದಿ ತನ್ನ ಸಾಕ್ಷ್ಯದಲ್ಲಿ ಸೈಯದ್ ಪಟೇಲ್‌ರವರು ದಿನಾಂಕಃ ೦೭-೦೬-೨೦೦೬ ರಲ್ಲಿ ಮೃತಪಟ್ಟಿರುವುದಾಗಿ ಸಾಕ್ಷ್ಯ ನುಡಿದಿದ್ದು, ಸದರಿ ಸಾಕ್ಷ್ಯವನ್ನು ಸುಳ್ಳು ಎಂದು ಅಲ್ಲಗಳೆಯುವ ಸಲುವಾಗಿ ಪ್ರತಿವಾದಿಯು ಪಿಡಬ್ಲ್ಯೂ-೧ ರವರನ್ನು ಪಾಟೀ ಸವಾಲಿಗೆ ಒಳಪಡಿಸಿದ ಸಂದರ್ಭದಲ್ಲಿ ಯಾವುದೇ ಪ್ರಶ್ನೆಗಳ ಮೂಲಕ ಸಾಕ್ಷಿ ಸುಳ್ಳು ಎಂದು ಅಲ್ಲಗಳೆಯುವ ಯಾವುದೇ ಪ್ರಯತ್ನವನ್ನು ಮಾಡಿಲ್ಲದೇ ಇರುವುದು ಪ್ರತಿವಾದಿಯ ಪರ ಸಾಕ್ಷ್ಯವನ್ನು ಪರಿಗಣಿಸಿದರೆ, ಕಂಡುಬರುವ ಅಂಶವಾಗಿರುತ್ತದೆ. ಈ ಬಗ್ಗೆ ಸೈಯದ್‌ಪಟೇಲ್‌ರವರು ತನ್ನ ತಂದೆ ಹುಸೇನ್‌ಪಟೇಲ್‌ರವರು ತೀರಿಕೊಳ್ಳುವ ಪೂರ್ವದಲ್ಲಿಯೇ ಮೃತಪಟ್ಟಿದ್ದಾರೆಂಬುದಾಗಿ ಪರಿಗಣಿಸಲು ವಾದಿಯ ಪರ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿ, ನಿಶಾನೆ ಪಿ-೪ ಮುಟೇಷನ್ ದಾಖಲೆಯಲ್ಲಿ ಹುಸೇನ್‌ಪಟೇಲ್ ರವರು ದಿನಾಂಕಃ ೨೧-೦೪-೨೦೦೨ ರಂದು ಮೃತಪಟ್ಟಿರುವುದಾಗಿ ಅದರ ಆಧಾರದ ಮೇಲೆ ದಾವಾ ಸ್ವತ್ತುಗಳು ೧ ರಿಂದ ೩ನೇ ಪ್ರತಿವಾದಿಯರ ಹೆಸರಿಗೆ ವರ್ಗಾವಣೆಯಾಗಿರುವುದು ಕಂಡುಬರುತ್ತದೆ. ಸದರಿ ದಾಖಲೆಯ ಸಾಕ್ಷ್ಯವನ್ನು ಪರಿಗಣಿಸಿದರೆ, ೧ನೇ ವಾದಿಯ ಗಂಡನಾದ ಮೃತ ಸೈಯದ್‌ಪಟೇಲ್‌ರವರು ತನ್ನ ತಂದೆಯಾದ ಹುಸೇನ್‌ಪಟೇಲ್ ರವರ ಮರಣದ ಸಂದರ್ಭದಲ್ಲಿ ಜೀವಂತವಾಗಿದ್ದು, ದಾವಾ ಸ್ವತ್ತುಗಳ

ವಾರಸುದಾರರಾಗಿ ಇರುವುದು ಕಂಡುಬರುತ್ತದೆ. ಹಾಗೇ ಪ್ರತಿವಾದಿಯು ತಮ್ಮ ಪ್ರತಿವಾದದಲ್ಲಿ ಮತ್ತು ಸಾಕ್ಷ್ಯದಲ್ಲಿ ೧ನೇ ವಾದಿಯ ಗಂಡನಾದ ಸೈಯದ್‌ಪಟೇಲ ರವರು ಹುಸೇನ್‌ಪಟೇಲ್ ರವರ ಜೀವಿತಾವಧಿಯಲ್ಲಿ ತೀರಿಕೊಂಡಿದ್ದಾರೆಂಬುದಾಗಿ ತಿಳಿಸಿರುತ್ತಾರೆ. ಆದರೆ ತಮ್ಮ ಸಾಕ್ಷ್ಯದಲ್ಲಿ ಸ್ಪಷ್ಟವಾಗಿ ವಾದಿಯರು ತಿಳಿಸಿರುವ ದಿನಾಂಕದಂದು ಮೃತ ಸೈಯದ್‌ಪಟೇಲ್ ರವರು ಜೀವಂತ ಇರಲಿಲ್ಲ ಆತ ಅದಕ್ಕೂ ಪೂರ್ವದಲ್ಲಿಯೇ ಮೃತಪಟ್ಟಿದ್ದನು ಎಂಬುದಾಗಿ ಸ್ಪಷ್ಟವಾಗಿ ದಿನಾಂಕವನ್ನು ತಿಳಿಸದೇ ಇರುವುದು ಕಂಡುಬರುತ್ತದೆ. ಹಾಗೂ ತಮ್ಮ ಪರ ದಾಖಲೆಗಳನ್ನು ಸಲ್ಲಿಸುವ ಮೂಲಕ ಮೃತ ಹುಸೇನ್‌ಪಟೇಲ್ ರವರ ಜೀವಿತಾವಧಿಯಲ್ಲಿ ತೀರಿಕೊಂಡಿದ್ದಾನೆಂಬುದಾಗಿ ರುಜುವಾತುಪಡಿಸುವ ನಿಟ್ಟಿನಲ್ಲಿ ಪಿಡಬ್ಲ್ಯೂ-೧ ರವರನ್ನು ಪಾಟೀ ಸವಾಲಿಗೆ ಒಳಪಡಿಸಿದ ಸಂದರ್ಭದಲ್ಲಿ ಪಿಡಬ್ಲ್ಯೂ-೧ ರವರಿಗೆ " ನನ್ನ ಗಂಡ ೨೦೦೬ ರಲ್ಲಿ ತೀರಿಕೊಂಡಿದ್ದರು. ನನ್ನ ಮಾವ ಹುಸೇನ್‌ಪಟೇಲ್ ಈಗ ಬದುಕಿಲ್ಲ" ಎಂದು ಸಾಕ್ಷ್ಯ ನುಡಿದಿರುವ ಸಂದರ್ಭದಲ್ಲಿ ಪ್ರತಿವಾದಿ ಮೃತ ಸೈಯದ್‌ಪಟೇಲ್‌ರವರು ೨೦೦೬ ರಲ್ಲಿ ಮೃತಪಟ್ಟಿರುವುದಿಲ್ಲ ಬದಲಿಗೆ ಅದಕ್ಕೂ ಪೂರ್ವದಲ್ಲಿಯೇ ಮೃತಪಟ್ಟಿದ್ದನು ಎಂಬುದಾಗಿ ಅಲ್ಲಗಳೆಯುವ ಸಲುವಾಗಿ ಯಾವುದೇ ಪ್ರಶ್ನೆಯನ್ನು ಕೇಳದೇ ಇರುವುದನ್ನು ಪರಿಗಣಿಸಿದರೆ, ಸೈಯದ್‌ಪಟೇಲ್ ರವರು ೨೦೦೬ ರಲ್ಲಿ ತೀರಿಕೊಂಡಿದ್ದಾರೆಂಬುದನ್ನು ಅಲ್ಲಗಳೆಯಲು ಪ್ರತಿವಾದಿಯ ಪರ ಯಾವುದೇ ಸಾಕ್ಷ್ಯಾಧಾರಗಳು ಇಲ್ಲದೇ ಇರುವುದನ್ನು ಪರಿಗಣಿಸಿದರೆ, ಮೃತ ಸೈಯದ್‌ಪಟೇಲ್ ರವರು ತನ್ನ ತಂದೆಯಾದ ಹುಸೇನ್‌ಪಟೇಲ್ ರವರ ಮರಣದ ಸಂದರ್ಭದಲ್ಲಿ ಜೀವಂತವಾಗಿದ್ದರು ಎಂಬುದಾಗಿ ಪರಿಗಣಿಸಲ್ಪಡುವ ಸಾಕ್ಷ್ಯವಾಗಿರುತ್ತದೆ.

೧೭. ೨ನೇ ಪ್ರತಿವಾದಿ ತನ್ನ ಪ್ರತಿವಾದದಲ್ಲಿ ಮೃತ ಸೈಯದ್‌ಪಟೇಲ್‌ರವರು ೧ನೇ ವಾದಿಯನ್ನು ೧೯೯೫ ರಲ್ಲಿ ತ್ಯಜಿಸಿರುವುದರಿಂದ ವಾದಿಯರು ಪ್ರತ್ಯೇಕವಾಗಿ ವಾಸ ಮಾಡುತ್ತಿರುತ್ತಾರೆ. ವಾದಿಯರು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುವುದಿಲ್ಲ ಎಂಬುದಾಗಿ ಪ್ರತಿವಾದವನ್ನು ತಳೆದಿರುತ್ತಾರೆ. ಪ್ರತಿವಾದಿಯು ತಮ್ಮ ವಾದವನ್ನು ರುಜುವಾತುಪಡಿಸಿರುವರೇ ಎಂಬುದಾಗಿ ಪರಿಶೀಲಿಸಲಾಗಿ, ೨ನೇ ಪ್ರತಿವಾದಿ ತಮ್ಮನ್ನು ತಾವು ಡಿಡಬ್ಲ್ಯೂ-೧ ಎಂದು ಸಾಕ್ಷಿ ವಿಚಾರಣೆಗೆ ಒಳಪಡಿಸಿಕೊಂಡು ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಮ್ಮ ಪ್ರತಿವಾದ ಪತ್ರದಲ್ಲಿ ತಿಳಿಸಿರುವ ಅಂಶಗಳನ್ನು

ಯಥಾವತ್ತಾಗಿ ತಿಳಿಸಿರುತ್ತಾರೆ. ಪ್ರತಿವಾದಿ ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ಮೃತ ಸೈಯದ್ ಪಟೇಲ್‌ರವರು ವಾದಿಯರನ್ನು ತ್ಯಜಿಸಿದ್ದರು ಅದ್ದರಿಂದ ವಾದಿಯರು ಮೃತ ಹುಸೇನ್‌ಪಟೇಲ್‌ರವರ ವಾರಸುದಾರರಾಗಿರುವುದಿಲ್ಲ ಎಂಬುದಾಗಿ ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕ ಸಾಕ್ಷ್ಯಾಧಾರಗಳ ಮೂಲಕ ರುಜುವಾತುಪಡಿಸಿರುವರೇ ಎಂಬುದಾಗಿ ಪರಿಶೀಲಿಸಲಾಗಿ, ೨ನೇಪ್ರತಿವಾದಿ ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ಯಾವುದೇ ಸಾಕ್ಷಿದಾರರನ್ನು ಸಾಕ್ಷಿ ವಿಚಾರಣೆಗೆ ಒಳಪಡಿಸಿಕೊಂಡಿಲ್ಲದೇ ಇರುವುದು ಕಂಡುಬರುತ್ತದೆ.

೧೮. ೨ನೇ ಪ್ರತಿವಾದಿಯು ಮೃತ ಸೈಯದ್‌ಪಟೇಲ್‌ರವರು ವಾದಿಯರನ್ನು ತ್ಯಜಿಸಿದ್ದನು ಎಂಬುದಾಗಿ ರುಜುವಾತುಪಡಿಸಲು ದಾಖಲೆಗಳನ್ನು ಹಾಜರುಪಡಿಸಿರುವರೇ ಎಂಬುದಾಗಿ ಪರಿಶೀಲಿಸಲಾಗಿ, ೨ನೇಪ್ರತಿವಾದಿಯು ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ೧ನೇ ವಾದಿ ಮತ್ತು ಮೃತ ಸೈಯದ್‌ಪಟೇಲ್‌ರವರ ವಿವಾಹ ರದ್ದತಿಯಾಗಿರುವ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳು ಕಂಡುಬರುವ ದಾಖಲೆಗಳನ್ನು ಸಲ್ಲಿಸುವ ಮೂಲಕ ತಮ್ಮ ಪ್ರತಿವಾದವನ್ನು ರುಜುವಾತುಪಡಿಸಲು ಯಾವುದೇ ದಾಖಲೆಗಳನ್ನು ಸಲ್ಲಿಸದೇ ಇರುವುದು ಕಂಡುಬರುತ್ತದೆ.

೧೯. ೨ನೇ ಪ್ರತಿವಾದಿಯು ತಮ್ಮ ಪ್ರತಿವಾದದಲ್ಲಿ ದಾವಾ ಸ್ವತ್ತುಗಳು ಈಗಾಗಲೇ ೨೦೦೭ ರಲ್ಲಿ ಪ್ರತಿವಾದಿಯರ ನಡುವೆ ಮೌಖಿಕವಾಗಿ ಪಾಲುಗಾರಿಕೆಯಾಗಿ ದಿನಾಂಕಃ ೨೧-೦೮-೨೦೦೭ ರಂದು ಪಾಲುಗಾರಿಕೆ ಪ್ರಕಾರ ಮುಟೇಷನ್ ಆಗಿರುತ್ತದೆ ಎಂಬುದಾಗಿ ಪ್ರತಿವಾದವನ್ನು ತಳೆದಿರುತ್ತಾರೆ. ೨ನೇ ಪ್ರತಿವಾದಿಯು ತಮ್ಮ ಪ್ರತಿವಾದವನ್ನು ರುಜುವಾತುಪಡಿಸಿರುವರೇ ಎಂಬುದಾಗಿ ಪರಿಶೀಲಿಸಲಾಗಿ, ೨ನೇ ಪ್ರತಿವಾದಿಯು ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಪ್ರತಿವಾದಪತ್ರದಲ್ಲಿ ತಿಳಿಸಿರುವ ಅಂಶಗಳನ್ನು ಯಥಾವತ್ತಾಗಿ ತಿಳಿಸಿರುತ್ತಾರೆ. ಪ್ರತಿವಾದಿಯು ತನ್ನ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ದಾವಾ ಸ್ವತ್ತುಗಳು ಪ್ರತಿವಾದಿಯರ ಮಧ್ಯೆ ಮೌಖಿಕವಾಗಿ ೨೦೦೭ ರಲ್ಲಿ ಪಾಲುಗಾರಿಕೆ ಆಗಿರುವುದಾಗಿ ಸಾಕ್ಷಿದಾರರನ್ನು ಸಾಕ್ಷಿ ವಿಚಾರಣೆಗೆ ಒಳಪಡಿಸಿಕೊಳ್ಳುವ ಮೂಲಕ ತಮ್ಮ ಪ್ರತಿವಾದವನ್ನು ರುಜುವಾತುಪಡಿಸಿರುವರೇ ಎಂಬುದಾಗಿ ಪರಿಶೀಲಿಸಲಾಗಿ, ಪ್ರತಿವಾದಿಯು ತನ್ನ

ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ಯಾವುದೇ ಸ್ವತಂತ್ರ ಸಾಕ್ಷಿದಾರರನ್ನು ಸಾಕ್ಷಿ ವಿಚಾರಣೆಗೆ ಒಳಪಡಿಸಿಕೊಂಡು ತನ್ನ ವಾದವನ್ನು ರುಜುವಾತುಪಡಿಸಲು ಯಾವುದೇ ಪ್ರಯತ್ನವನ್ನು ಮಾಡದೇ ಇರುವುದು ಕಂಡುಬರುತ್ತದೆ.

೨೦. ೨ನೇ ಪ್ರತಿವಾದಿಯು ದಾವಾ ಸ್ವತ್ತುಗಳು ಈಗಾಗಲೇ ಪ್ರತಿವಾದಿಯರ ಮಧ್ಯೆ ೨೦೦೭ ರಲ್ಲಿ ಮೌಖಿಕವಾಗಿ ಪಾಲುಗಾರಿಕೆಯಾಗಿರುವುದಾಗಿ ದಾಖಲೆಗಳನ್ನು ಸಲ್ಲಿಸಿ ರುಜುವಾತುಪಡಿಸಿರುವರೇ ಎಂಬುದಾಗಿ ಪರಿಶೀಲಿಸಲಾಗಿ, ಪ್ರತಿವಾದಿ ತಮ್ಮ ಪ್ರತಿವಾದದಂತೆ ಮೌಖಿಕ ಪಾಲುಗಾರಿಕೆಯ ಆಧಾರದ ಮೇಲೆ ಪ್ರತಿವಾದಿಯರ ಹೆಸರಿಗೆ ಮುಟೇಷನ್ ವರ್ಗಾವಣೆಯಾಗಿರುತ್ತದೆ ಎಂಬುದಾಗಿ ತಳೆದಿರುವ ವಾದಕ್ಕೆ ಪೂರಕವಾಗಿ ತಹಶೀಲ್ದಾರರವರ ಆದೇಶದ ಪ್ರತಿಯನ್ನು ನಿಶಾನೆ ಡಿ-೪ ರಂತೆ ಹಾಜರುಪಡಿಸಿ, ಗುರ್ತಿಸಿಕೊಂಡಿರುತ್ತಾರೆ. ಸದರಿ ನಿಶಾನೆ ಡಿ-೪ ದಾಖಲೆಯನ್ನು ಪರಿಶೀಲಿಸಲಾಗಿ, ದಾವಾ ಸ್ವತ್ತುಗಳನ್ನು ೧ನೇ ಪ್ರತಿವಾದಿಯಾದ ಜುಲೇಖಬೇಗಂರವರ ಒಪ್ಪಿಗೆಯ ಮೇರೆಗೆ ೨ ಮತ್ತು ೩ನೇ ಪ್ರತಿವಾದಿಯರ ಹೆಸರಿಗೆ ಪಹಣಿ ಪತ್ರಿಕೆ ವರ್ಗಾವಣೆಯಾಗಿರುವುದು ಕಂಡುಬರುತ್ತದೆ. ಸದರಿ ದಾಖಲೆಗೆ ಪೂರಕವಾಗಿ ಪ್ರತಿವಾದಿ ತಮ್ಮ ಪರ ಮೌಖಿಕ ಮತ್ತು ದಾಖಲೆಯ ಸಾಕ್ಷ್ಯಾಧಾರಗಳನ್ನು ಸಲ್ಲಿಸುವ ಮೂಲಕ ದಾವಾ ಸ್ವತ್ತುಗಳು ಈಗಾಗಲೇ ಮೃತ ಹುಸೇನ್‌ಪಟೇಲ್ ರವರ ವಾರಸುದಾರರಲ್ಲಿ ಕಾನೂನುಬದ್ದವಾಗಿ ಪಾಲುಗಾರಿಕೆಯಾಗಿದೆ ಎಂಬುದಾಗಿ ರುಜುವಾತುಪಡಿಸಲು ವಿಫಲರಾಗಿರುವುದು ಕಂಡುಬರುತ್ತದೆ.

೨೧. ೨ನೇ ಪ್ರತಿವಾದಿಯು ಪಿಡಬ್ಲ್ಯೂ-೧ ರವರನ್ನು ಪಾಟೀ ಸವಾಲಿಗೆ ಒಳಪಡಿಸಿದ ಸಂದರ್ಭದಲ್ಲಿ ದಾವಾ ಸ್ವತ್ತುಗಳು ಈಗಾಗಲೇ ಮೌಖಿಕವಾಗಿ ಪಾಲುಗಾರಿಕೆಯಾಗಿದೆ ಎಂಬುದಾಗಿ ರುಜುವಾತುಪಡಿಸಿರುವರೇ ಎಂಬುದಾಗಿ ಪರಿಶೀಲಿಸಲಾಗಿ, ಪಿಡಬ್ಲ್ಯೂ-೧ ರವರಿಗೆ ಪಾಟೀ ಸವಾಲಿನಲ್ಲಿ "ಸದರಿ ನನ್ನ ಮಾವ ತಮ್ಮ ಜೀವಿತಾವಧಿಯಲ್ಲಿ ತಮ್ಮ ಎಲ್ಲ ಆಸ್ತಿಗಳ ಪಾಲುಗಾರಿಕೆ ಮಾಡಿದ್ದಾರೆಂದರೆ ಸರಿಯಲ್ಲ. ಸರ್ವೆ ನಂ.೪೫/ಎ ೨ನೇ ಪ್ರತಿವಾದಿಗೆ ಬಂದಿದೆ ಎಂದರೆ ಸರಿಯಲ್ಲ. ನನ್ನ ಗಂಡ ಸೈಯದ್‌ಪಟೇಲ ಅವರಿಗೆ ಸರ್ವೆ ನಂ.೧೬/೨ ರಲ್ಲಿ ೩೭ ಗುಂಟೆ ಜಮೀನು ಮತ್ತು

ಸರ್ವೆ ನಂ.೧೭/೧ ರಲ್ಲಿ ೨ ಎಕರೆ ೩೧ ಗುಂಟೆ ಜಮೀನು ಬಂದಿದೆ ಎಂದರೆ ಸುಳ್ಳು. ೩ನೇ ಪ್ರತಿವಾದಿಗೆ ಸರ್ವೆ ನಂ.೧೬/೨ ರಲ್ಲಿ ೨೮ ಗುಂಟೆ ಜಮೀನು ಬಂದಿದೆ ಎಂದರೆ ಸುಳ್ಳು. ೩ನೇ ಪ್ರತಿವಾದಿಗೆ ಸರ್ವೆ ನಂ.೧೭/೧ ರಲ್ಲಿ ೨ ಎಕರೆ ೩೧ ಗುಂಟೆ ಜಮೀನು ಬಂದಿದೆ ಎಂದರೆ ನಿಜ. ಸದರಿ ವಿಭಾಗದಂತೆ ದಿನಾಂಕಃ ೨೧-೦೮-೨೦೦೭ ರಲ್ಲಿ ಸಂಬಂಧಪಟ್ಟ ಕಂದಾಯ ಕಛೇರಿಗೆ ಅರ್ಜಿಕೊಟ್ಟು ಮುಟೇಷನ ಮಾಡಿಸಲಾಗಿದೆ ಎಂದರೆ ಸುಳ್ಳು. ಸರ್ವೆ ನಂ.೧೭/೧ ರಲ್ಲಿ ೨ ಎಕರೆ ೩೧ ಗುಂಟೆ ಜಮೀನು ಖುರ್ಷಿದಬೇಗಂ ಹೆಸರಿನಲ್ಲಿ ಸೈಯದ್‌ಪಟೇಲ್‌ನ ವಾರರಸುದಾರಳು ಅಂತೆ ಮಟೇಷನ್ ಆಗಿದೆ ಎಂದರೆ ನಿಜ." ಎಂದು ಪ್ರಶ್ನಿಸುವ ಮೂಲಕ ಪ್ರತಿವಾದಿಯು ದಾವಾ ಸ್ವತ್ತುಗಳು ಈಗಾಗಲೇ ಪ್ರತಿವಾದಿಯರಲ್ಲಿ ಪಾಲುಗಾರಿಕೆಯಾಗಿದೆ ಎಂಬುದಾಗಿ ನಿಖರವಾಗಿ ತಮ್ಮ ಮೌಖಿಕ ಸಾಕ್ಷ್ಯದಿಂದ ರುಜುವಾತುಪಡಿಸಲು ವಿಫಲರಾಗಿರುವುದು ಕಂಡುಬರುತ್ತದೆ. ಹಾಗೇ ೨ನೇ ಪ್ರತಿವಾದಿಯು ಪಿಡಬ್ಲ್ಯೂ-೧ ರವರಿಗೆ ಪ್ರಶ್ನಿಸಿರುವ ಅಂಶವಾದ ಅಂದರೆ "ಸದರಿ ನನ್ನ ಮಾವ ತಮ್ಮ ಜೀವಿತಾವಧಿಯಲ್ಲಿ ತಮ್ಮ ಎಲ್ಲ ಆಸ್ತಿಗಳ ಪಾಲುಗಾರಿಕೆ ಮಾಡಿದ್ದಾರೆಂದರೆ ಸರಿಯಲ್ಲ." ಎಂದು ಪ್ರಶ್ನಿಸಿರುವುದನ್ನು ಪರಿಗಣಿಸಿ, ವಾದಿಯರ ಪರ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ದಾಖಲೆಗಳನ್ನು ಪರಿಶೀಲಿಸಲಾಗಿ, ನಿಶಾನೆ ಪಿ-೪ ರ ಪ್ರಕಾರ ಮೃತ ಹುಸೇನ್‌ಪಟೇಲ್‌ರವರಿಂದ ಪೌತಿಯ ಆಧಾರದ ಮೇಲೆ ದಾವಾ ಸ್ವತ್ತುಗಳು ೧ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿರುತ್ತದೆ. ನಂತರ ದಾವಾ ಸ್ವತ್ತುಗಳು ೧ನೇ ಪ್ರತಿವಾದಿಯ ಒಪ್ಪಿಗೆಯ ಮೇರೆಗೆ ೧ ಮತ್ತು ೨ನೇ ಪ್ರತಿವಾದಿಯರಿಗೆ ಮುಟೇಷನ್ ವರ್ಗಾವಣೆಯಾಗಿರುತ್ತದೆ. ದಾವಾ ಸ್ವತ್ತುಗಳು ಪಾಲುಗಾರಿಕೆಯ ಆಗಿದೆ ಎಂಬುದಾಗಿ ಪರಿಗಣಿಸಲು ಮುಟೇಷನ್ ದಾಖಲೆಗೆ ಪೂರಕವಾಗಿ ಯಾವುದೇ ಪಾಲುಗಾರಿಕೆ ಪತ್ರವನ್ನು ಹಾಜರುಪಡಿಸುವ ಮೂಲಕ ಅಥವಾ ಪಾಲುಗಾರಿಕೆ ಆದ ಬಗ್ಗೆ ಪೂರಕ ಸಾಕ್ಷಿದಾರರನ್ನು ಸಾಕ್ಷಿ ವಿಚಾರಣೆಗೆ ಒಳಪಡಿಸುವ ಮೂಲಕ ೨ನೇ ಪ್ರತಿವಾದಿಯು ದಾವಾ ಸ್ವತ್ತುಗಳು ಈಗಾಗಲೇ ಪಾಲುಗಾರಿಕೆಯಾಗಿದೆ ಎಂಬುದಾಗಿ ರುಜುವಾತುಪಡಿಸಲು ವಿಫಲರಾಗಿರುವುದು ಪ್ರತಿವಾದಿಯ ಪರ ಮೌಖಿಕ ಮತ್ತು ದಾಖಲೆಯ ಸಾಕ್ಷ್ಯಾಧಾರಗಳನ್ನು ಪರಿಗಣಿಸಿದರೆ, ಕಂಡುಬರುವ ಸತ್ಯಾಂಶವಾಗಿರುತ್ತದೆ.

೨೨. ವಾದಿಯರು ಮತ್ತು ಪ್ರತಿವಾದಿಯ ಪರ ಮೌಖಿಕ ಮತ್ತು ದಾಖಲೆಯ ಸಾಕ್ಷ್ಯಾಧಾರಗಳನ್ನು ಪರಿಗಣಿಸಿದರೆ, ಮೃತ ಸೈಯದ್‌ಪಟೇಲ್‌ರವರು ತನ್ನ ತಂದೆ ಹುಸೇನ್‌ಪಟೇಲ್ ರವರ ಮರಣದ ಸಂದರ್ಭದಲ್ಲಿ ಜೀವಂತವಾಗಿದ್ದು, ಆತನು ವಾರಸುದಾರರಾಗಿ ಇರುವುದಾಗಿ ರುಜುವಾತು ಆಗಿರುವುದರಿಂದ ವಾದಿಯರು ಮೃತ ಸೈಯದ್‌ಪಟೇಲ್ ಮತ್ತು ಹುಸೇನ್‌ಪಟೇಲ್ ರವರ ವಾರಸುದಾರರಾಗಿ ದಾವಾ ಸ್ವತ್ತುಗಳ ಜಂಟೀ ಸ್ವಾಧೀನದಾರರು ಆಗಿರುವುದು ರುಜುವಾತ್ತಾದ ಅಂಶವಾಗಿರುವುದರಿಂದ ವಿವಾದಂಶ-೧ ನ್ನು ಸಕಾರಾತ್ಮಕವಾಗಿ ಹಾಗೂ ವಿವಾದಾಂಶ-೨ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

೨೩. **<u>ವಿವಾದಾಂಶ-೩ಃ</u>** ೨ನೇಪ್ರತಿವಾದಿಯು ತಮ್ಮ ಪ್ರತಿವಾದದಲ್ಲಿ ಸದರಿ ಮೃತ ಸೈಯದ್ ಪಟೇಲ್ ರವರು ಖುರ್ಷಿದಬೇಗಂ ಎನ್ನುವವರನ್ನು ಮದುವೆಯಾಗಿರುತ್ತಾರೆ. ಆಕೆ ಆತನ ವಾರಸುದಾರರಾಗಿ ಜೀವಂತ ಇರುತ್ತಾರೆ. ಸದರಿ ಖುರ್ಷಿದಬೇಗಂ ಸರ್ವೆ ನಂ.೧೬/೨ ಮತ್ತು ೧೭/೧ ರ ಸ್ವತ್ತಿನಲ್ಲಿ ೩೭ ಗುಂಟೆ ಜಮೀನನ್ನು ವಾರಸುದಾರರಾಗಿ ಪಡೆದಿರುತ್ತಾರೆ. ಆದ್ದರಿಂದ ಸದರಿ ದಾವೆ ಅವಶ್ಯಕ ಪಕ್ಷಗಾರರನ್ನು ಒಳಗೊಂಡಿಲ್ಲದೇ ಇರುವುದರಿಂದ ವಜಾಗೊಳ್ಳಲು ಯೋಗ್ಯವಾಗಿರುತ್ತದೆ ಎಂಬುದಾಗಿ ಪ್ರತಿವಾದವನ್ನು ತಳೆದಿರುತ್ತಾರೆ. ೨ನೇ ಪ್ರತಿವಾದಿ ತಮ್ಮ ಪ್ರತಿವಾದವನ್ನು ರುಜುವಾತುಪಡಿಸಿರುವರೇ ಎಂಬುದಾಗಿ ಪರಿಶೀಲಿಸಲಾಗಿ, ೨ನೇ ಪ್ರತಿವಾದಿ ತಮ್ಮನ್ನು ತಾವು ಡಿಡಬ್ಲ್ಯೂ-೧ ಎಂದು ಸಾಕ್ಷಿ ವಿಚಾರಣೆಗೆ ಒಳಪಡಿಸಿಕೊಂಡು ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಪ್ರತಿವಾದ ಪತ್ರದಲ್ಲಿ ತಿಳಿಸಿರುವ ಅಂಶಗಳನ್ನು ಯಥಾವತ್ತಾಗಿ ತಿಳಿಸಿರುತ್ತಾರೆ. ಪ್ರತಿವಾದಿ ತನ್ನ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ದಾಖಲೆಗಳನ್ನು ಸಲ್ಲಿಸಿ, ಮೃತ ಸೈಯದ್‌ಪಟೇಲ್‌ರವರಿಗೆ ಖುರ್ಷಿದಾಬೇಗಂ ಎಂಬ ಪತ್ನಿ ಇರುತ್ತಾಳೆ ಎಂಬುದಾಗಿ ರುಜುವಾತುಪಡಿಸಿರುವರೇ ಎಂಬುದಾಗಿ ಪರಿಶೀಲಿಸಲಾಗಿ, ಪ್ರತಿವಾದಿಯು ತನ್ನ ಪರ ನಿಶಾನೆ ಡಿ-೧ ರಿಂದ ೫ ದಾಖಲೆಗಳನ್ನು ಹಾಜರುಪಡಿಸಿದ್ದು, ಸದರಿ ದಾಖಲೆಗಳಲ್ಲಿ ತಮ್ಮ ಕುಟುಂಬಕ್ಕೆ ಸಂಬಂಧಿಸಿದ ವಂಶಾವಳಿ ದಾಖಲೆಯನ್ನು ಹಾಜರುಪಡಿಸದೇ ಇರುವುದು ಕಂಡುಬರುತ್ತದೆ. ಆದರೆ ನಿಶಾನೆ ಡಿ-೪ ಮತ್ತು ೫ ದಾಖಲೆಗಳಲ್ಲಿ ಖುರ್ಷಿದಾಬೇಗಂ ಗಂಡ ಸೈಯದ್‌ಪಟೇಲ್ ರವರಿಗೆ ದಾವಾ ಸ್ವತ್ತುಗಳಲ್ಲಿ ೩ ಎಕರೆ

೧೮ ಗುಂಟೆ ಜಮೀನು ವಾರಸುದಾರಿಕೆಯ ಆಧಾರದ ಮೇಲೆ ಪಹಣಿ ಪತ್ರಿಕೆ ಬದಲಾವಣೆ ಆಗಿರುವುದು ಕಂಡುಬರುತ್ತದೆ.

೨೪. ಪ್ರತಿವಾದಿಯ ಪರ ನಿಶಾನೆ ಡಿ-೪ ಮತ್ತು ೫ ದಾಖಲೆಯ ಪ್ರಕಾರ ಮೃತ ಸೈಯದ್‌ಪಟೇಲ್ ರವರಿಗೆ ಖುರ್ಷಿದಾಬೇಗಂ ಎಂಬ ಪತ್ನಿ ಇರುವುದು ಕಂಡುಬರುತ್ತದೆ. ಹಾಗೇ ಈ ಬಗ್ಗೆ ಪ್ರತಿವಾದಿಯ ಪರ ಮೌಖಿಕ ಸಾಕ್ಷ್ಯಧಾರವನ್ನು ಪರಿಶೀಲಿಸಿ, ಪಿಡಬ್ಲ್ಯೂ-೧ ರವರ ಪಾಟೀ ಸವಾಲನ್ನು ಪರಿಶೀಲಿಸಲಾಗಿ, ಪಿಡಬ್ಲ್ಯೂ-೧ ರವರು "ನನ್ನನ್ನು ಬಿಟ್ಟ ಮೇಲೆ ೨೦೦೪ ರಲ್ಲಿ ಸೈಯದ್‌ಪಟೇಲ್ ಒಬ್ಬ ಖುರ್ಷಿದಾಬೇಗಂ ಜೊತೆ ಮದುವೆ ಆಗಿದ್ದಾರೆಂದರೆ ಅವರು ಮದುವೆಯಾಗಿದ್ದು ನಿಜ. ಸದರಿ ಖುರ್ಷಿದಬೇಗಂ ಇಂದಿಗೂ ಚಿಂಚೋಳಿ ತಾಲ್ಲೂಕಿನಲ್ಲಿ ಇದ್ದಾಳೆ ಎಂದರೆ ನಿಜ." ಎಂದು ಸಾಕ್ಷಿ ನುಡಿದಿರುವುದನ್ನು ಪರಿಗಣಿಸಿದರೆ ಖುರ್ಷಿದಾಬೇಗಂ ಎಂಬುವರು ಸಹ ಮೃತ ಸೈಯದ್‌ಪಟೇಲ್ ರವರ ಪತ್ನಿಯಾಗಿರುವುದು ರುಜುವಾತಾದ ಅಂಶವಾಗಿರುತ್ತದೆ.

೨೫. ಪ್ರತಿವಾದಿಯ ಪ್ರತಿವಾದದ ಆಧಾರದ ಮೇಲೆ ವಾದಿಯು ಖುರ್ಷಿದಾಬೇಗಂ ರವರನ್ನು ಪಕ್ಷಗಾರರನ್ನಾಗಿ ಮಾಡುವ ಸಲುವಾಗಿ ಅರ್ಜಿಯನ್ನು ಸಲ್ಲಿಸಿದ್ದು, ಆದರೆ ಸದರಿ ಪಕ್ಷಗಾರರ ಹಾಜರಾತಿಗಾಗಿ ದಿನಾಂಕಃ ೧೨-೦೯-೨೦೧೭ ರಿಂದ ೨೦-೦೮-೨೦೧೮ ರವರೆಗೆ ಸಾಕಷ್ಟು ಸಮಯ ಅವಕಾಶ ನೀಡಿದ್ದರು ಸಹ ಸೂಕ್ತ ಕ್ರಮವನ್ನು ಕೈಗೊಳ್ಳುವ ಮೂಲಕ ಸದರಿ ಖುರ್ಷಿದಾಬೇಗಂ ರವರ ಹಾಜರಾತಿಗಾಗಿ ಸೂಕ್ತ ಪ್ರಯತ್ನವನ್ನು ಮಾಡದೇ ಇರುವ ಕಾರಣ ದಿನಾಂಕಃ೧೦-೦೭-೨೦೧೮ ರಂದು ಸದರಿಯವರ ಹಾಜರಾತಿಗಾಗಿ ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಲಾಗಿರುತ್ತದೆ. ಪ್ರಸ್ತುತ ದಾವೆಯನ್ನು ಮೃತ ಸೈಯದ್‌ಪಟೇಲ್‌ರವರ ಮತ್ತೊಬ್ಬ ಹೆಂಡತಿಯಾದ ಖುರ್ಷಿದಾಬೇಗಂ ರವರು ಈ ದಾವೆಯ ಅವಶ್ಯಕ ಪಕ್ಷಗಾರರಾಗಿರುವರೇ ಎಂಬುದಾಗಿ ಪರಿಶೀಲಿಸಿ ನೋಡಲಾಗಿ, ಖುರ್ಷಿದಾಬೇಗಂ ರವರು ಮೃತ ಸೈಯದ್‌ಪಟೇಲ್‌ರವರ ವಾರಸುದಾರರಾಗಿದ್ದರೂ ಸಹ ಮಹಮದ್ದೀಯ ಕಾನೂನಿನ ಅಡಿಯಲ್ಲಿ ಮೃತ ಹುಸೇನ್‌ಪಟೇಲ್ ರವರ ಪಾಲುದಾರರಾಗಿ ( Sharer) ದಾವಾ ಸ್ವತ್ತುಗಳಲ್ಲಿ ಹಕ್ಕು ಪಡೆದುಕೊಳ್ಳದೇ ಇರುವ ಕಾರಣ

ಸದರಿ ಖುರ್ಷಿದಾಬೇಗಂ ರವರು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರಾಗಿಲ್ಲದೇ ಇರುವುದು ಕಂಡುಬರುತ್ತದೆ. ಇದಕ್ಕೆ ಪೂರಕವಾಗಿ ೨ನೇ ಪ್ರತಿವಾದಿಯು ತನ್ನ ಪರವಾಗಿ ಸಲ್ಲಿಸಿರುವ ತೀರ್ಪಾದ ಗೌರವಾನ್ವಿತ ಕರ್ನಾಟಕ ಉಚ್ಚನ್ಯಾಯಾಲಯದ ಆರ್.ಎಫ್.ಎ. ನಂ.೨೨೯/೧೯೯೮ Smt. Ashabi Vs. Smt. Faziyabi and Ors. MUSLIM LAW- Right of widow of pre-deceased son in the property left behind her mother-in-law- HELD- The widow of pre-deceased son is excluded from claiming any share in the light of her husband dying prior to the death of his mother. ತೀರ್ಪಿನಲ್ಲಿ ತಿಳಿಸಿರುವ ಕಾನೂನಿನ ಅಂಶವನ್ನು ಪರಿಗಣಿಸಿದರೆ, ಖುರ್ಷಿದಾಬೇಗಂ ರವರು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರು ಆಗಿಲ್ಲದೇ ಇರುವುದನ್ನು ಪರಿಗಣಿಸಿ, ವಿವಾದಾಂಶ-೩ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

೨೬. <u>**ವಿವಾದಾಂಶ-೪:**</u> ೨ನೇ ಪ್ರತಿವಾದಿ ತನ್ನ ಪ್ರತಿವಾದದಲ್ಲಿ ವಾದಿಯು ದಾವಾ ಸ್ವತ್ತುಗಳಲ್ಲಿ ಕೋರಿರುವ ೧/೭ನೇ ಭಾಗಾಂಶ ಮಹಮದ್ದೀಯ ಕಾನೂನಿನ ಅಡಿಯಲ್ಲಿ ಯೋಗ್ಯವಾಗಿರುವುದಿಲ್ಲ ಎಂಬುದಾಗಿ ವಾದವನ್ನು ತಳೆದಿರುತ್ತಾರೆ. ೨ನೇ ಪ್ರತಿವಾದಿ ತಳೆದಿರುವ ಪ್ರತಿವಾದವನ್ನು ಪರಿಗಣಿಸಿ, ಕಾನೂನಿನ ಅಂಶವನ್ನು ಪರಿಶೀಲಿಸಿ ನೋಡಲಾಗಿ, ಮಹಮದ್ದೀಯ ಕಾನೂನಿನ ಅಡಿಯಲ್ಲಿ ಪಾಲುದಾರರು (Sharer) ಅಥವಾ ಉಳಿಕೆ ಆಸ್ತಿಯ ವಾರಸುದಾರರು (Residuary) ನಡುವೆ ಆಯಾಯ ವ್ಯಕ್ತಿಯ ಸಂಬಂಧದ ನಡುವೆ ಪ್ರತ್ಯೇಕವಾಗಿ ಆಸ್ತಿಯಲ್ಲಿ ನಿಖರವಾದ ಪಾಲಿಗೆ ಹಕ್ಕುದಾರರು ಎಂಬುದಾಗಿ ತಿಳಿಸಿರುವುದರಿಂದ ವಾದಿಯರು ಮತ್ತು ಪ್ರತಿವಾದಿಯರ ನಡುವೆ ಸಂಬಂಧಕ್ಕೆ ಅನುಗುಣವಾಗಿ ಹಕ್ಕು ಹಿತಾಸಕ್ತಿಯನ್ನು ನಿಖರವಾಗಿ ಕಾನೂನಿನ ಅಡಿಯಲ್ಲಿ ಪಡೆದುಕೊಳ್ಳುವುದರಿಂದ ವಾದಿಯರು ದಾವಾ ಸ್ವತ್ತುಗಳಲ್ಲಿ ಪ್ರತಿವಾದಿಯರೊಂದಿಗೆ ಸಮನಾಗಿ ೧/೭ನೇ ಭಾಗಾಂಶದ ಹಕ್ಕನ್ನು ಕೋರಿರುವುದು ಕಾನೂನಿನ ಅಡಿಯಲ್ಲಿ ಊರ್ಜಿತವಾಗಿಲ್ಲದೇ ಇರುವುದರಿಂದ ಪ್ರತಿವಾದಿಯ ಪ್ರತಿವಾದವನ್ನು ಮಹಮದ್ದೀಯ ಕಾನೂನಿನ ಅಡಿಯಲ್ಲಿ ಪರಿಗಣಿಸಿ, ವಿವಾದಾಂಶ-೪ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

೨೭. **<u>ವಿವಾದಾಂಶ-೩ಃ</u>** ವಾದಿಯರು ತಮ್ಮ ವಾದದಲ್ಲಿ ಮಾರ್ಚ್-೨೦೧೩ ರಲ್ಲಿ ಪ್ರತಿವಾದಿಯರಿಗೆ ಭೇಟಿಯಾಗಿ ಪಾಲುಗಾರಿಕೆ ಮಾಡಿಕೊಳ್ಳಲು ವಾದಿಯರು ಕೇಳಿರುತ್ತಾರೆ. ಆಗ ಪ್ರತಿವಾದಿಯರು ಒಪ್ಪಿಕೊಂಡಿದ್ದು, ನಂತರ ಮೇ-೨೦೧೩ ರಲ್ಲಿ ದಾವಾ ಸ್ವತ್ತುಗಳನ್ನು ಪಾಲುಗಾರಿಕೆ ಮಾಡಿಕೊಳ್ಳುವ ಸಂಬಂಧ ಪಂಚಾಯ್ತಿ ಮಾಡಲಾಗಿ, ಪಂಚಾಯ್ತಿಯವರು ದಾವಾ ಸ್ವತ್ತುಗಳಲ್ಲಿ ವಾದಿಯರಿಗೆ ಭಾಗಾಂಶ ನೀಡುವಂತೆ ತಿಳಿಸಲಾಗಿ, ಪ್ರತಿವಾದಿಯರು ಸಕಾರಣವಿಲ್ಲದೇ ಭಾಗಾಂಶ ನೀಡಲು ನಿರಾಕರಿಸಿರುತ್ತಾರೆ. ವಾದಿಯರಿಗೆ ಪ್ರತಿವಾದಿಯರು ದಿನಾಂಕಃ೨೭-೦೫-೨೦೧೩ ರಲ್ಲಿ ಭಾಗಾಂಶ ನೀಡಲು ನಿರಾಕರಿಸಿದಾಗ ಈ ವ್ಯಾಜ್ಯಕಾರಣ ಉಂಟಾಗಿರುವುದಾಗಿ ವಾದವನ್ನು ಮಂಡಿಸಿರುತ್ತಾರೆ. ವಾದಿಯರ ವಾದಕ್ಕೆ ಪ್ರತಿಯಾಗಿ ೨ನೇ ಪ್ರತಿವಾದಿಯು ತಮ್ಮ ಪ್ರತಿವಾದದಲ್ಲಿ ದಾವಾ ಸ್ವತ್ತುಗಳಲ್ಲಿ ಭಾಗಾಂಶ ನೀಡುವಂತೆ ವಾದಿಯರು ಕೋರಿರುತ್ತಾರೆ ಎಂಬುದಾಗಿ ತಿಳಿಸಿರುವುದು ಸುಳ್ಳಿನಿಂದ ಕೂಡಿದ್ದಾಗಿರುತ್ತದೆ. ಹಾಗೇ ವಾದಿಯರು ಮತ್ತು ಪ್ರತಿವಾದಿಯರ ಮಧ್ಯೆ ವ್ಯಾಜ್ಯಕಾರಣ ಉಂಟಾಗಿದೆ ಎಂಬುದಾಗಿ ತಿಳಿಸಿರುವುದು ಸುಳ್ಳಿನಿಂದ ಕೂಡಿದ್ದಾಗಿರುತ್ತದೆ. ಹಾಗೇ ವಾದಿಯರ ಪಾಲುಗಾರಿಕೆ ಮತ್ತು ಪ್ರತ್ಯೇಕ ಸ್ವಾಧೀನತೆಯ ದಾವೆ ಕಾಲಮಿತಿ ಮೀರಿದ ದಾವೆಯಾಗಿರುವುದಾಗಿ ವಾದವನ್ನು ಮಂಡಿಸಿರುತ್ತಾರೆ.

೨೮. ೨ನೇ ಪ್ರತಿವಾದಿಯು ವಾದಿಯರ ದಾವೆ ಕಾಲಮಿತಿ ಮೀರಿದ ದಾವೆಯಾಗಿರುವುದಾಗಿ ತಳೆದಿರುವ ಪ್ರತಿವಾದವನ್ನು ರುಜುವಾತುಪಡಿಸಿರುವರೇ ಎಂಬುದಾಗಿ ಪರಿಶೀಲಿಸಲಾಗಿ, ೨ನೇ ಪ್ರತಿವಾದಿ ತನ್ನ ಪ್ರತಿವಾದ ಪತ್ರದಲ್ಲಿ ತಳೆದಿರುವ ಅಂಶಗಳನ್ನು ಯಥಾವತ್ತಾಗಿ ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿರುತ್ತಾರೆ. ಪ್ರತಿವಾದಿಯು ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ವಾದಿಯರಿಗೆ ಯಾವ ದಿನಾಂಕ ದಾವೆಯನ್ನು ಸಲ್ಲಿಸುವ ಕಾಲಾವಧಿ ಆರಂಭವಾಗಿರುತ್ತದೆ ಎಂಬ ಬಗ್ಗೆ ಯಾವುದೇ ವಿವರಣೆಯನ್ನು ಸ್ಪಷ್ಟವಾಗಿ ತಿಳಿಸದೇ ಇರುವುದು ಕಂಡುಬರುತ್ತದೆ. ಆದರೆ ಪ್ರತಿವಾದಿ ತಮ್ಮ ಪ್ರತಿವಾದದಲ್ಲಿ ದಾವಾ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ಈಗಾಗಲೇ ೨೦೦೭ ರಲ್ಲಿ ಪ್ರತಿವಾದಿಯರ ಮಧ್ಯೆ ಮೌಖಿಕ ಪಾಲುಗಾರಿಕೆ

ಆಗಿರುವುದರಿಂದ ವಾದಿಯರ ದಾವೆ ಕಾಲಮಿತಿ ಮೀರಿರುವುದಾಗಿ ತಿಳಿಸಿರುತ್ತಾರೆ. ಪ್ರತಿವಾದಿಯು ದಾವಾ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ಪಾಲುಗಾರಿಕೆ ಆಗಿರುವುದಾಗಿ ರುಜುವಾತುಪಡಿಸಿರುವರೇ ಎಂಬುದಾಗಿ ಪರಿಶೀಲಿಸಿ ನೋಡಲಾಗಿ, ಪ್ರತಿವಾದಿಯು ತನ್ನ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ದಾವಾ ಸ್ವತ್ತುಗಳನ್ನು ಈಗಾಗಲೇ ಪಾಲುಗಾರಿಕೆ ಮಾಡಿಕೊಳ್ಳಲಾಗಿದೆ ಎಂದು ರುಜುವಾತುಪಡಿಸಲು ವಿಫಲರಾಗಿರುತ್ತಾರೆ. ಹಾಗೇ ತನ್ನ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ಕಂದಾಯ ದಾಖಲೆಗಳನ್ನು ಹೊರತುಪಡಿಸಿ, ಪೂರಕ ದಾಖಲೆಗಳನ್ನು ಸಲ್ಲಿಸದೇ ಇರುವುದನ್ನು ಪರಿಗಣಿಸಿದರೆ, ದಾವಾ ಸ್ವತ್ತುಗಳು ಈಗಾಗಲೇ ವಾದಿಯರು ಮತ್ತು ಪ್ರತಿವಾದಿಯರ ಮಧ್ಯೆ ಪಾಲುಗಾರಿಕೆ ಆಗಿದೆ ಎಂಬುದಾಗಿ ಪರಿಗಣಿಸಲು ಸೂಕ್ತ ಸಾಕ್ಷ್ಯಾಧಾರಗಳು ಇಲ್ಲದೇ ಇರುವುದು ಕಂಡುಬರುತ್ತದೆ.

೨೯. ಪ್ರತಿವಾದಿಯು ತಮ್ಮ ಪ್ರತಿವಾದದಲ್ಲಿ ವಾದಿಯರ ದಾವೆಯು ಕಾಲಪರಿಮಿತಿ ಕಾಯ್ದೆ ಕಲಂ. ೧೧೩ ರಡಿಯಲ್ಲಿ ಕಾಲಮಿತಿ ಮೀರಿರುವುದಾಗಿ ಪ್ರತಿವಾದವನ್ನು ತಳೆದಿದ್ದು, ಪ್ರತಿವಾದಿಯು ತಳೆದಿರುವ ಪ್ರತಿವಾದಕ್ಕೆ ಪೂರಕವಾಗಿ ವಾದಿಯರ ಪರ ಮೌಖಿಕ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿ, ಪ್ರತಿವಾದಿ ಪಿಡಬ್ಲ್ಯೂ-೧ ರವರಿಗೆ ಪಾಟೀ ಸವಾಲಿನಲ್ಲಿ "ಸದರಿ ಆಸ್ತಿಗಳಲ್ಲಿ ನನ್ನದು ಸಹ ಹಕ್ಕು ಇದೆ ಅಂತಾ ಪ್ರತಿವಾದಿಯರಿಗೆ ೨೦೦೭ ರಲ್ಲಿ ಕೇಳಿದೆ. ಅವರು ನನಗೆ ಹಿಸ್ಸೆ ಕೊಡುತ್ತೇನೆ ಅಂತಾ ಹೇಳಿದರು. ಅವರು ಇಂದು ಅಥವಾ ನಾಳೆ ಹಿಸ್ಸೆ ಕೊಡುತ್ತೇವೆ ಅಂತಾ ಮುಂದೂಡಿದರು. ನಾನು ೨೦೦೮ ಅಥವಾ ೨೦೦೯ ರಲ್ಲಿ ಯಾವುದೇ ಕಾನೂನಿನ ಕ್ರಮ ಕೈಗೊಂಡಿಲ್ಲ." ಎಂದು ಸಾಕ್ಷ್ಯ ನುಡಿದಿರುವುದನ್ನು ಪರಿಗಣಿಸಿ, ೧ನೇ ವಾದಿಯು ೨೦೦೭ ರಲ್ಲಿ ದಾವಾ ಸ್ವತ್ತುಗಳಲ್ಲಿ ಹಿಸ್ಸೆ ಕೇಳಿರುವುದು ಕಂಡುಬರುತ್ತದೆ. ಅದರಂತೆ ೨೦೦೭ ರಿಂದ ೩ ವರ್ಷಗಳ ಅವದಿಯ ಒಳಗಾಗಿ ದಾವೆ ಸಲ್ಲಿಸದೇ ೨೦೧೩ ರಲ್ಲಿ ದಾವೆ ಸಲ್ಲಿಸಿರುವುದು ಕಂಡುಬರುತ್ತದೆ. ಎಲ್ಲಾ ವಾದಿಯರ ದಾವೆ ಕಾಲಪರಿಮಿತಿ ಮೀರಿರುವುದಾಗಿ ಕಂಡುಬರುತ್ತದೆಯೇ ಎಂಬುದಾಗಿ ಪರಿಶೀಲಿಸಲಾಗಿ, ಕಾಲಪರಿಮಿತಿ ಕಾಯ್ದೆ ಕಲಂ.೧೧೩ ರಲ್ಲಿ ದಾವೆ ಸಲ್ಲಿಸಲು ಯಾವಾಗ ಹಕ್ಕು ಉಂಟಾಗಿರುತ್ತದೆಯೇ ಅಂದಿನಿಂದ ೩ ವರ್ಷಗಳ ಅವಧಿಯ ಒಳಗಾಗಿ ದಾವೆಯನ್ನು ಸಲ್ಲಿಸಲು ಕಾಲಪರಿಮಿತಿ ಇರುತ್ತದೆ. ವಾದಿಯರ ದಾವೆಯನ್ನು ಪರಿಶೀಲಿಸಲಾಗಿ, ಪ್ರಸ್ತುತ ದಾವೆಯಲ್ಲಿ ೧ನೇ ವಾದಿಯು ತನ್ನ ಅತ್ತೆಯ ಜೀವಿತಾ

ಕಾಲದಲ್ಲಿ ದಾವಾ ಸ್ವತ್ತುಗಳಲ್ಲಿ ಹಕ್ಕು ಹಿತಾಸಕ್ತಿ ಉಂಟಾಗಿಲ್ಲದೇ ಇರುವುದು ಕಂಡುಬರುತ್ತದೆ. ಆದರೆ ೨ನೇ ವಾದಿಯು ಅಪ್ರಾಪ್ತ ವಯಸ್ಕಳಾಗಿದ್ದು, ಆಕೆಯ ಪರವಾಗಿ ನೈಸರ್ಗಿಕ ಸಂರಕ್ಷಳಾಗಿ ೧ನೇ ವಾದಿಯು ದಾವೆ ಸಲ್ಲಿಸಿರುವುದು ಕಂಡುಬರುತ್ತದೆ. ೨ನೇ ವಾದಿಯು ಈ ದಾವೆಯಲ್ಲಿ ಕೋರಿರುವ ಹಕ್ಕು ಪಡೆದುಕೊಳ್ಳಲು ಕಾಲಪರಿಮಿತಿ ಮೀರಿರುವುದಾಗಿ ಪರಿಗಣಿಸಲು ಯಾವುದೇ ಸೂಕ್ತ ಸಾಕ್ಷ್ಯಾಧಾರಗಳು ಇಲ್ಲದೇ ಇರುವುದರಿಂದ, ವಾದಿಯರ ದಾವೆ ಕಾಲಮಿತಿ ಮೀರಿರುವುದಾಗಿ ರುಜುವಾತುಪಡಿಸಲು ೨ನೇ ಪ್ರತಿವಾದಿ ವಿಫಲರಾಗಿರುವುದನ್ನು ಪರಿಗಣಿಸಿ, ವಿವಾದಾಂಶ-೫ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

೩೦. **ವಿವಾದಾಂಶ-೬:** ವಾದಿಯರು ಈ ದಾವೆಯಲ್ಲಿ ಕೋರಿರುವಂತೆ ಭಾಗಾಂಶವನ್ನು ಪಡೆದುಕೊಳ್ಳಲು ಅರ್ಹರಾಗಿರುವುದಾಗಿ ರುಜುವಾತುಪಡಿಸಿರುವರೇ ಎಂಬುದಾಗಿ ಪರಿಶೀಲಿಸಲಾಗಿ, ವಾದಿಯರು ದಾವಾ ಸ್ವತ್ತುಗಳು ಕುಟುಂಬದ ಮೂಲ ಕರ್ತನಾದ ಹುಸೇನಪಟೇಲ್ ರವರಿಂದ ಬಂದ ಸ್ವತ್ತುಗಳಾಗಿರುವುದಾಗಿ ತಮ್ಮ ಪರ ಮೌಖಿಕ ಮತ್ತು ದಾಖಲೆಯ ಸಾಕ್ಷ್ಯಾಧಾರಗಳಿಂದ ರುಜುವಾತುಪಡಿಸಿರುತ್ತಾರೆ. ಹಾಗೇ ೨ನೇ ಪ್ರತಿವಾದಿಯು ದಾವಾ ಸ್ವತ್ತುಗಳು ಈಗಾಗಲೇ ಕುಟುಂಬದ ಸದಸ್ಯರಲ್ಲಿ ಕಾನೂನುಬದ್ದವಾಗಿ ವಿಭಾಗ ಆಗಿದೆ ಎಂಬುದಾಗಿ ರುಜುವಾತುಪಡಿಸಲು ವಿಫಲರಾಗಿರುವುದು ೨ನೇ ಪ್ರತಿವಾದಿಯ ಪರ ಮೌಖಿಕ ಮತ್ತು ದಾಖಲೆಯ ಸಾಕ್ಷ್ಯಧಾರಗಳನ್ನು ಪರಿಶೀಲಿಸಿದರೆ ಕಂಡುಬರುತ್ತದೆ. ೧ನೇ ವಾದಿಯು ದಾವಾ ಸ್ವತ್ತುಗಳಲ್ಲಿ ತನ್ನ ಅತ್ತೆ ಅಂದರೆ, ೧ನೇ ಪ್ರತಿವಾದಿಯ ಜೀವಿತಾವಧಿಯಲ್ಲಿ ಹಕ್ಕು ಹಿತಾಸಕ್ತಿ ಪಡೆದುಕೊಳ್ಳದೇ ಇರುವುದು ಮಹಮ್ಮದೀಯ ಕಾನೂನಿನ ಅಂಶವನ್ನು ಪರಿಗಣಿಸಿದರೆ ಕಂಡುಬರುತ್ತದೆ. ಹಾಗೇ ೨ನೇ ವಾದಿಯು ದಾವಾ ಸ್ವತ್ತುಗಳಲ್ಲಿ ಹುಸೇನ್ ಪಟೇಲ್ ರವರ ವಾರಸುದಾರರಾಗಿ ( Sharer) ಮಹಮ್ಮದೀಯ ಕಾನೂನಿನಲ್ಲಿ ತನ್ನದೇ ಆದ ಪಾಲಿನ ಭಾಗಾಂಶವನ್ನು ಪಡೆದುಕೊಳ್ಳಲು ಅರ್ಹರಾಗಿರುವುದನ್ನು ಪರಿಗಣಿಸಿ, ವಿವಾದಾಂಶ-೬ನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

೩೧. **<u>ವಿವಾದಾಂಶ.೭ಃ</u>** ವಿವಾದಾಂಶ-೧ ರಿಂದ ೬ ರಲ್ಲಿ ಚರ್ಚಿಸಿರುವ ಕಾರಣಗಳ ಆದಾರದ ಮೇಲೆ ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಆ ದೇ ಶ

**ವಾದಿಯರು ದಾವಾ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ಸಲ್ಲಿಸಲಾಗಿರುವ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನತೆಯ ದಾವೆಯನ್ನು ಭಾಗಶಃ ಪುರಸ್ಕರಿಸಲಾಗಿದೆ.**

**ಮುಂದುವರೆದು, ೨ನೇ ವಾದಿಯು ದಾವಾ ಸ್ವತ್ತುಗಳಲ್ಲಿ ೧/೨ನೇ ಭಾಗಾಂಶದ ಹಕ್ಕು ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ ಎಂದು ನಿರ್ಣಯಿಸಲಾಗಿದೆ.**

**ತೀರ್ಪಿಗೆ ಅನುಸಾರವಾಗಿ ಪ್ರಾಥಮಿಕ ಡಿಕ್ರಿ ತಯಾರಿಸಲು ಆದೇಶಿಸಲಾಗಿದೆ.**

(ಈ ಮೇಲಿನ ತೀರ್ಪನ್ನು ಶೀಘ್ರಲಿಪಿಗಾರನಿಗೆ ನೇರವಾಗಿ ಗಣಕಯಂತ್ರದ ಮೇಲೆ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ, ತಪ್ಪಿದಲ್ಲಿ ತಿದ್ದಿ ದಿನಾಂಕಃ ೧೧ನೇ ಸೆಪ್ಟೆಂಬರ್-೨೦೧೮ ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

**(ಪ್ರೇಮ್‌ಕುಮಾರ್)**
**ಅಪರ ಸಿವಿಲ್ ನ್ಯಾಯಾಧೀಶರು**
**ಚಿಂಚೋಳಿ.**

## ಅ ನು ಬ ಂ ಧ

**೦೧. <u>ವಾದಿಯರ ಪರ ಸಾಕ್ಷ್ಯಕರಿಸಿದ ಸಾಕ್ಷಿದಾರರ ಪಟ್ಟಿ</u> :-**

ಪಿಡಬ್ಲ್ಯೂ-೧:- ಶಾನುಬೀ ತಂದೆ ಲೇಟ್ ಸೈಯದ್ ಪಟೇಲ್

**೦೨. <u>ಪ್ರತಿವಾದಿಯರ ಪರ ಸಾಕ್ಷ್ಯಕರಿಸಿದ ಸಾಕ್ಷಿದಾರರ ಪಟ್ಟಿ</u>**

ಡಿಡಬ್ಲ್ಯೂ-೧ಃ- ಸೈಯದ್ ಪಟೇಲ್ ತಂದೆ ಲೇಟ್ ಹುಸೇನ್ ಪಟೇಲ್.

**೦೩. <u>ವಾದಿಯರ ಪರ ಗುರುತಿಸಲಾದ ನಿಶಾನೆಗಳ ಪಟ್ಟಿ</u>**

ನಿ.ಪಿ-೧ ರಿಂದ ೩ ಃ- ಮೂರು ಪಹಣಿ ಪತ್ರಿಕೆಗಳು.
ನಿ.ಪಿ-೪ ರಿಂದ ೧೧ ಃ- ೦೮ ಮ್ಯುಟೇಶನ ಪ್ರತಿಗಳು.

ನಿ.ಪಿ-೧೨ :- ಸಾಮಥ್ಯಾಧಾರಿತ ಕಲಿಕೆಯ ಪ್ರಗತಿ ಪತ್ರ.
ನಿ.ಪಿ-೧೩ ರಿಂದ ೨೦ :- ೦೮ ಪಹಣಿ ಪತ್ರಿಕೆಗಳು.
ನಿ.ಪಿ-೨೧ ರಿಂದ ೨೩ :- ದಾವಾ ಸ್ವತ್ತಿಗೆ ಸಂಬಂಧಪಟ್ಟ ೦೩ ಮ್ಯುಟೇಶನ ನಕಲುಗಳು.

**ಳ) ಪ್ರತಿವಾದಿಯರ ಪರ ಗುರುತಿಸಲಾದ ನಿಶಾನೆಗಳ ಪಟ್ಟಿ**

ನಿ.ಡಿ-೧ ರಿಂದ ೩: ಸ.ನಂ.೧೭/೧ ಕ್ಕೆ ಜಮೀನಿಗೆ ಸಂಬಂದಿಸಿದ ೨ ಪಹಣಿ ಪತ್ರಿಕೆಗಳು ಮತ್ತು ಸರ್ವೆ ನಂ. ೪೫/ಅ ರ ಜಮೀನಿಗೆ ಸಂಬಂಧಿಸಿದ ಪಹಣಿ ಪತ್ರಿಕೆಗಳು.

ನಿ.ಡಿ-೪ : ಕೋಡ್ಲಿ ಉಪತಹಸೀಲ್ದಾರರು ಮಾಡಿದ ಆದೇಶದ ಪ್ರಮಾಣೀತ ಪ್ರತಿ
ನಿ.ಡಿ-೫ : ದಿನಾಂಕಃ ೨೭-೦೮-೨೦೦೭ ರಂದು ಆಗಿರುವ ಮುಟೇಷನ್ ನಂ.೩ ರ ಪ್ರಮಾಣೀತ ಪ್ರತಿ

**(ಪ್ರೇಮ್‌ಕುಮಾರ್)**
**ಅಪರ ಸಿವಿಲ್ ನ್ಯಾಯಾಧೀಶರು**
**ಚಿಂಚೋಳಿ.**